ಕರ್ನಾಟಕ ವಿಧಾನ ಸಭೆ

ಬುಧವಾರ 22ನೇ ಮಾರ್ಚ್ 2000ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 11- 10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪ) ಅವರು ಪೀಠವನ್ನು ಅಲಂಕರಿಸಿದ್ದರು.

1. ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2000 ಮಂಡನೆಗೆ ವಿರೋಧ ಪಕ್ಷದವರಿಂದ ಧರಣಿ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ನೆನ್ನೆಯ ದಿವಸ ಸರ್ಕಾರ ತಂದಿರತಕ್ಕಂಥ ವಿಧೇಯಕವನ್ನು ಸದನದಲ್ಲಿ ಮಂಡನೆ ಆಗಬಾರದೆಂಬ ಉದ್ದೇಶ ಇಟ್ಟುಕೊಂಡು ಧರಣಿ ಮಾಡುತ್ತಿದ್ದೆವು. ಕಾರಣ ಸದರಿ ಬಿಲ್ಲನ್ನು ಸದುದ್ದೇಶದಿಂದ ತಂದಿರುವುದಿಲ್ಲ, ಇದನ್ನು ರಾಜಕೀಯ ದುರುದ್ದೇಶ ಇಟ್ಟುಕೊಂಡು ಇಲ್ಲಿ ತಂದಿದ್ದಾರೆ. ಆದ್ದರಿಂದ, ಮೂಲಭೂತವಾಗಿ ಇದನ್ನು ಮಂಡನೆ ಮಾಡುವುದಕ್ಕೆ ನಮ್ಮ ವಿರೋಧ ಇದೆ. ಆದ್ದರಿಂದ, ನಮ್ಮ ಪ್ರತಿಭಟನೆ ಇವತ್ತು ಕೂಡ ಮುಂದುವರೆಯುತ್ತದೆ, ದಯವಿಟ್ಟು ಪ್ರತಿಭಟನೆಗೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

(ಈ ಹಂತದಲ್ಲಿ ಭಾರತೀಯ ಜನತಾ ಪಾರ್ಟಿಯ ಸದಸ್ಯರು ಸದನದ ಬಾವಿಯಲ್ಲಿ ಧರಣಿಯನ್ನು ಮುಂದುವರೆಸಿದರು.)

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಸನ್ಮಾನ್ಯ ಅಧ್ಯಕ್ಷರೆ, ನೆನ್ನೆ ದಿವಸ ಸರ್ಕಾರದ ಮತ್ತು ನಿಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ನಾವು ಬಹಳ ಪ್ರಯತ್ನ ಮಾಡಿದೆವು. ವಿಶೇಷವಾಗಿ ಸಭಾಧ್ಯಕ್ಷರ ಕೃಪೆ ಮತ್ತು ಅನುಕಂಪ ವಿರೋಧಪಕ್ಷದವರ ಮೇಲೆ ಇಲ್ಲದೇ ಹೋದರೆ ನಾವು ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ ಮತ್ತು ಈ ಸದನದ ಗೌರವವನ್ನು ಎತ್ತಿ ಹಿಡಿಯತಕ್ಕಂಥ ವಿಚಾರದಲ್ಲಿ ನಮಗೆಲ್ಲಾ ಬಹಳ ನಂಬಿಕೆ ಇದೆ. ದುರಾದೃಷ್ಟವಶಾತ್ ಸರ್ಕಾರ ಮಾಡತಕ್ಕಂಥ ಎಲ್ಲಾ ವಿಷಯವನ್ನು ಒಪ್ಪಿಕೊಳ್ಳುವುದಕ್ಕೆ ನಾವು ಇಲ್ಲಿ ಬಂದಿಲ್ಲ. ನಾವು ಜನ ಪ್ರತಿನಿಧಿಗಳಾಗಿರುವುದು ನಮ್ಮ ಪಕ್ಷದ ಮತ್ತು ನಾವು ಜನಗಳಿಗೆ ಹೇಳಿರತಕ್ಕಂಥ ವಿಚಾರಗಳನ್ನು ಜನರಿಗೆ ತಿಳಿಸುವುದಕ್ಕೋಸ್ಕರ ನಮ್ಮ ಪಕ್ಷದ ಪ್ರಣಾಳಿಕೆಯ ಮೂಲಕ ಹೇಳುತ್ತೇವೆ. ಈ ಸದನವನ್ನು ಪಕ್ಷದ ವೇದಿಕೆಯನ್ನಾಗಿ ಬಳಸಿಕೊಳ್ಳುವುದಕ್ಕೆ ನಾವು ಇಷ್ಟಪಡುವುದಿಲ್ಲ. ನಾವು ಆಡಳಿತ ಪಕ್ಷದ ಗೌರವಾನ್ವಿತ ಸದಸ್ಯರ ಮನಸ್ಸನ್ನು ಒಲಿಸಿಕೊಂಡು ಎಲ್ಲಾ

ವಿಚಾರಗಳನ್ನು ಹೇಳುವುದಕ್ಕಾಗಿ ನನಗೆ ಸಂಪೂರ್ಣವಾದ ಅವಕಾಶ ಸಿಗಲಿಲ್ಲ ಮತ್ತು ಸರ್ಕಾರದ ಈ ಹಠಮಾರಿತನ ಧೋರಣೆ ಏನಿದೆ ಅದು ಸರಿಯಾದುದು ಅಲ್ಲ. ಈ ಸದನದಲ್ಲಿ ಅನೇಕ ಸಂಪ್ರದಾಯಗಳಿವೆ, ನಾನು ಕೇವಲ ಕರ್ನಾಟಕ ವಿಧಾನಸಭೆಗೆ ಸಂಬಂಧಪಟ್ಟಂತೆ ಹೇಳುತ್ತಿಲ್ಲ. ರಾಷ್ಟ್ರದ ಅನೇಕ ವಿಧಾನಸಭೆಯಲ್ಲಿ ಮತ್ತು ಪಾರ್ಲಿಮೆಂಟ್‌ನಲ್ಲಿಯೂ ಈ ರೀತಿಯಾದ ಉದಾಹರಣೆಗಳಿವೆ. ಸರ್ಕಾರ ಈ ರೀತಿಯಾದ ಕಾನೂನುಗಳನ್ನು ತಂದಂಥ ಸಂದರ್ಭದಲ್ಲಿ ಪಾಪಸ್ಸು ತೆಗೆದುಕೊಂಡಿರತಕ್ಕಂಥ ಉದಾಹರಣೆಗಳು ಸಹ ಬಹಳಷ್ಟಿವೆ. ಕಳೆದ 6 ತಿಂಗಳಿಂದ ನಮ್ಮನ್ನು ಬಹಳ ವಿಶ್ವಾಸಕ್ಕೆ ತೆಗೆದುಕೊಂಡು ಈ ಸದನವನ್ನು ನಡೆಸಿಕೊಂಡು ಬಂದಿದ್ದೀರಿ. ಆದರೆ ನಿನ್ನೆಯ ದಿನ ನಾವು ನಿಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ವಿಫಲರಾಗಿದ್ದೇವೆಂದು ಹೇಳಬೇಕಾಗಿದೆ. ಇದರಲ್ಲಿ ನಿಮ್ಮದು ಏನು ತಪ್ಪಿಲ್ಲ, ಆದರೆ ಸರ್ಕಾರದವರ ಹಠಮಾರಿತನದ ವಿರುದ್ಧವಾಗಿ ಅದರ ಧೋರಣೆಯ ವಿರುದ್ಧವಾಗಿ, ಪ್ರಜಾತಂತ್ರದ ಮೌಲ್ಯಗಳನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಇದು ಸರಿಯಲ್ಲವೆನ್ನುವ ದೃಷ್ಟಿಯಿಂದ ಮತ್ತು ಮಾನ್ಯ ಸಭಾನಾಯಕರು ನಿನ್ನೆಯ ದಿವಸ ಇರಲಿಲ್ಲ. ಅವರ ಒಂದು ಹಿತದೃಷ್ಟಿಯಿಂದ ನಾವು ಅನೇಕ ವಿಚಾರಗಳನ್ನು ಹೇಳಬೇಕೆಂದುದ ಇದ್ದೆವು. ಅದರೂ ಸಹ ತಾವು ಅದಕ್ಕೆ ಅವಕಾಶವನ್ನು ಕೊಡಲಿಲ್ಲ, ಆದ್ದರಿಂದ ಈ ಸರ್ಕಾರದ ಧೋರಣೆಯ ವಿರುದ್ಧವಾಗಿ ಈ ಧರಣಿಯನ್ನು ನಾವು ಮುಂದುವರಿಸುತ್ತೇವೆ.

(ಈ ಹಂತದಲ್ಲಿ ಶ್ರೀ ಪಿ.ಜಿ.ಆರ್.ಸಿಂಧ್ಯಾರವರು ಸದನದ ಬಾವಿಗೆ ಧಾವಿಸಿದರು)

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಜನತಾದಳದ (ಯು) ಪಕ್ಷದ ನಾಯಕರು ಈಗ ಏನು ಹೇಳಿದ್ದಾರೆ ನಾನು ಅದನ್ನು ಕೇಳಿದ್ದೇನೆ. ಆದರೆ ಶ್ರೀ ಸಿಂಧ್ಯಾರವರು 5-6ನೇ ಬಾರಿ ಆರಿಸಿ ಈ ಸದನಕ್ಕೆ ಚುನಾಯಿತರಾಗಿ ಬಂದಿದ್ದಾರೆ. ಅವರಿಗೆ ನಾನು ಪಾರ್ಲಿಮೆಂಟರಿ ಪ್ರೊಸೀಜರ್ ಬಗ್ಗೆ ಅವರಿಗೆ ಏನು ಹೇಳಿಕೊಡಬೇಕಾಗಿಲ್ಲ, ಅವರು ನಮಗಿಂತಲೂ ಬದ್ಧಿವಂತರಿದ್ದಾರೆ, ಈ ಸಭೆಯಲ್ಲಿ ಒಂದು ನಿಯಮಾವಳಿಯನ್ನು ಹಾಕಿಕೊಂಡಿರುತ್ತೇವೆ, ಆ ನಿಯಮಾವಳಿಯ ಪ್ರಕಾರ ನೀವು ನಡೆದುಕೊಂಡರೆ ನಮ್ಮ ಕೃಪೆ ನಿಮ್ಮ ಮೇಲೆ ಯಾವಾಗಲೂ ಇದ್ದೆ ಇರುತ್ತದೆ. ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ, ಆ ನಿಯಮಾವಳಿಯನ್ನು ಯಾರು ಬಿಟ್ಟುಹೋಗುತ್ತಾರೆ ಅವರ ಮೇಲೆ ನಮ್ಮ ಕೃಪೆ ಹೇಗೆ ಇರುತ್ತದೆ? ನೀವೇ ಹೇಳಿ. ತಾವುಗಳು ಮೋಷನ್ ಮೂವ್ ಮಾಡದೆ ಯಾವ ರೀತಿಯಾದಂತಹ ಅಬ್ಜೆಕ್ಷನ್ ಮಾಡುತ್ತೀರಿ? I cannot understand. ನೀವು ಮೋಷನ್ ಮೂವ್ ಮಾಡಿ ನಂತರ ಅದರ ಮೇಲೆ ಮಾತನಾಡಿ, ಅಲ್ಲಿ ನಮಗೆ ಏನಿದೆ, ಅದರ ಬಗ್ಗೆ 5 ನಿಮಿಷ ಮಾತನಾಡಬಹುದು. Brief questions by the legislators, ಅಂತ ನಿದೆ. ಮೋಷನ್ ಮೂವ್ ಮಾಡದೆ ವ್ಯಾಕ್ಯೂಮ್ ಮೇಲೆ ನೀವು ಹೇಗೆ ಪ್ರಶ್ನೆಯನ್ನು ಮಾಡುತ್ತೀರಿ? ಇದು ಹೇಗೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಬಿಲ್ಲಿಗೆ ಸಂಬಂಧಪಟ್ಟಂತೆ ಮೋಷನ್ ಆಗಲೇ ಮೂವ್ ಆಗಿದೆ.

ಅಧ್ಯಕ್ಷರು: ನಾನು ನಿನ್ನೆಯ ವಿಷಯವನ್ನು ಹೇಳುತ್ತಿರುವುದು. I am not discussing yesterday's matter.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುವುದು ಇಷ್ಟೆ, ಯಾವ ಯಾವ ಮಸೂದೆಗಳನ್ನು ಸರ್ಕಾರ ತರಬೇಕೆನ್ನುವುದು ಅದು ಸರ್ಕಾರದ ವಿವೇಚನೆಗೆ ಬಿಟ್ಟದ್ದು, ಅದನ್ನು ಪ್ರತಿಪಕ್ಷಕ್ಕೆ ವಿರೋಧ ಮಾಡುವ ಅಧಿಕಾರ ಮತ್ತು ಅವಕಾಶ ಎರಡು ಇದೆ. ಈ ಅವಕಾಶ ತಾವು ಹೇಳಿದಂತೆ ನಮ್ಮ ನಿಯಮಗಳಲ್ಲಿ ಇದೆ, ತಾವು ನಿನ್ನೆ ಅವಕಾಶವನ್ನು ಮಾಡಿಕೊಟ್ಟಿರುತ್ತೀರಿ, ಮಾನ್ಯ ಸಚಿವರು ಮಸೂದೆಯನ್ನು ಈಗಾಗಲೇ ಮಂಡಿಸಿರುತ್ತಾರೆ. ಬಿಲ್ ಮಂಡನೆಯಾದ ಮೇಲೆ ಅದನ್ನು ಚರ್ಚೆ ಮಾಡುವುದಕ್ಕೆ ಅವರ ಅಭಿಪ್ರಾಯಗಳನ್ನು ಅವರು ಹೇಳಬಹುದು. ಅಭಿಪ್ರಾಯವನ್ನು ಹೇಳಿದ ಮೇಲೆ ಅದನ್ನು ಏನು ಮಾಡಬೇಕು ಎನ್ನುವುದರ ಬಗ್ಗೆ ಕುಳಿತು ಆಲೋಚನೆ ಮಾಡಬಹುದು, ಅದನ್ನು ಬಿಟ್ಟು ಸರ್ಕಾರ ಯಾವುದೇ ಮಸೂದೆಯನ್ನು ತಂದರೆ ಅದನ್ನು ನಾವು ವಿರೋಧ ಮಾಡುತ್ತೇವೆ ಎಂದರೆ ವಿರೋಧ ಮಾಡಲಿ, ಆದರೆ ಈ ರೀತಿಯ ವಿರೋಧವನ್ನು ಮಾಡುವುದು ನಮ್ಮ ಸದನದ ಈ ಸತ್ಸಂಪ್ರದಾಯಕ್ಕೆ ಸಲ್ಲತಕ್ಕ ಗೌರವ ಅಲ್ಲವೆಂದು ನನ್ನ ಭಾವನೆ. ಅವರು ಬಹಳ ಹಿರಿಯ ಸದಸ್ಯರಿದ್ದಾರೆ, ಅವರು ಈ ಸದನಕ್ಕೆ ಮಾರ್ಗದರ್ಶನವನ್ನು ನೀಡಬೇಕು, ಈಗ ಮಸೂದೆಯನ್ನು ಮಂಡನೆ ಮಾಡಲಾಗಿದೆ. ನಮ್ಮ ನಿಯಮಾವಳಿಯ ಪ್ರಕಾರ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ವಿರೋಧವನ್ನು ಮಾಡುವುದರಲ್ಲಿ ಸಂಶಯ ಬೇಡ, ಅದನ್ನು ವಿರೋಧ ಮಾಡಲಿ. ಅದಕ್ಕಾಗಿ ನಾನು ಸರ್ಕಾರದ ಪಡವಾಗಿ ಅವರಲ್ಲಿ ವಿನಂತಿಯನ್ನು ಮಾಡುತ್ತೇನೆ, ಈಗ ಮಂಡಿಸಿರತಕ್ಕಂತಹ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ತಾವು ಅನುಮತಿಯನ್ನು ಕೊಡಬೇಕು. ಈ ಚರ್ಚೆಯಲ್ಲಿ ಹಿರಿಯ ಸದಸ್ಯರುಗಳು ಭಾಗವಹಿಸಿ ತಮ್ಮ ಸಲಹೆಯನ್ನು ಸರ್ಕಾರಕ್ಕೆ ಮತ್ತು ಈ ಸದನಕ್ಕೆ ಕೊಡಬೇಕೆಂದು ಸರ್ಕಾರದ ವತಿಯಿಂದ ತಮ್ಮ ಮೂಲಕವಾಗಿ ನಾನು ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ನನ್ನ ಪ್ರಶ್ನೆ ಇಷ್ಟೆ, ಇದಕ್ಕೆ ಸಂಬಂಧಪಟ್ಟಂತೆ ಮೋಷನ್ ಮೂವ್ ಮಾಡದೆ ಅದರ ಮೇಲೆ ನೀವು ಅಬ್ಜೆಕ್ಷನ್ ಎತ್ತುವುದು ಅಷ್ಟು ಸರಿಯಾದುದಲ್ಲ. ನಾನು ನಿಯಮಾವಳಿಯ ಪ್ರಕಾರ ಹೇಳುತ್ತಿದ್ದೇನೆ, ನಿನ್ನೆ ಮಾನ್ಯ ಸಚಿವರು ಮೋಷನ್ ಮೂವ್ ಮಾಡಿದ್ದಾರೆ. ಈಗ ಬಿಲ್ ಮಂಡನೆಯಾಗಿರುವುದರಿಂದ ಅದರ ಮೇಲೆ ಮಾತನಾಡಿ ನಾವು ಬೇಡವೆಂದು ಹೇಳುವುದಕ್ಕಾಗುವುದಿಲ್ಲ. ಇದರ ಜೊತೆಗೆ ಇನ್ನೊಂದನ್ನು ತಿಳಿದುಕೊಳ್ಳಿ. ವಿರೋಧಪಕ್ಷದ ಸದಸ್ಯರು ಮತ್ತು ಆಡಳಿತ ಪಕ್ಷದ ಸದಸ್ಯರು ಈ

ಸದನದಲ್ಲಿ ಏನು ಮಾಡುತ್ತಿದ್ದಾರೆ, ಯಾವ ರೀತಿಯಾಗಿ ನಾವು ನಡೆದುಕೊಳ್ಳುತ್ತಿದ್ದೇವೆ ಜನತೆ ಅದನ್ನು ವಾಚ್ ಮಾಡುತ್ತಿರುತ್ತಾರೆ. ಟಿವಿಯಲ್ಲಿ ಮತ್ತು ಪತ್ರಿಕೆಯಲ್ಲಿ ಓದುತ್ತಾರೆ. ದಯಮಾಡಿ ಆಡಳಿತ ಪಕ್ಷದವರಿಗೆ ಮತ್ತು ವಿರೋಧಪಕ್ಷದವರಿಗೆ ಇಬ್ಬರಿಗೂ ಹೇಳುತ್ತಿದ್ದೇನೆ, ನಿಮ್ಮ ಒಬ್ಬರಿಗೆ ಮಾತ್ರ ಹೇಳಿಲ್ಲ. ಯಾವುದೇ ನಿಯಮಾವಳಿಗೆ ನೀವು ವಿರುದ್ಧವಾಗಿ ನಡೆದರೆ ಜನ ವಾಚ್ ಮಾಡುತ್ತಾರೆ. ದಯವಿಟ್ಟು ನೀವು ಆಲೋಚನೆಯನ್ನು ಮಾಡಬೇಕು. Even now it is not too late. ತಾವು ತಮ್ಮ ಆಸನಗಳಿಗೆ ದಯಮಾಡಿ ಹೋಗಿ, ಅವರು ಬಿಲ್ ಮೂವ್ ಮಾಡಿದ್ದಾರೆ, ಅದರ ಮೇಲೆ ಸಮಯವನ್ನು ನಿಗದಿಮಾಡಿ ಎರಡು-ಮೂರು ತಾಸುಗಳವರೆಗೆ ತಾವುಗಳು ಮಾತನಾಡಬಹುದು. ಸುಮ್ಮನೆ ಈ ರೀತಿಯಾಗಿ ಧರಣಿಯಲ್ಲಿ ನಿರತರಾದರೆ ಹೇಗೆ? ಈ ರೀತಿ ಮಾಡಿದರೆ ನಾವು ಸದನದ ಕಾರ್ಯಕಲಾಪವನ್ನು ಹೇಗೆ ಮುಂದುವರಿಸುವುದು?

(ಸದನದ ಬಾವಿಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಪಿ.ಜಿ.ಆರ್.ಸಿಂಧ್ಯಾರವರು ಮಾತನಾಡಿದರು)

ಅನೇಕ ಸಲ ಸದಸ್ಯರುಗಳು ಬಾವಿಯಲ್ಲಿರುವಾಗ ಧರಣಿ ಮಾಡುವಾಗ ಅನೇಕ ಬಿಲ್ಲುಗಳು ಪಾಸಾಗಿವೆ, ಬಜೆಟ್ ಮೇಲಿನ ಡಿಮ್ಯಾಂಡ್ಸ್‌ಗಳು ಸಾಕಷ್ಟು ಪಾಸಾಗಿವೆ. ಅವೊತ್ತು ನಾನು ಏನು ಹೇಳಿದೆ. That is only my appeal. That is not a ruling. That was only my appeal. That is not the ruling. ರೂಲಿಂಗ್ಸ್ ಕೊಟ್ಟಿರುವುದು ಬೇಕಾದಷ್ಟು ಇದೆ, ಈ ರೀತಿ ಧರಣಿ ಮಾಡುವುದು ಬೇಕಾಗಿಲ್ಲ. Even now it is not too late. ತಾವು ದಯವಿಟ್ಟು ತಮ್ಮ ತಮ್ಮ ಆಸನಗಳಿಗೆ ಹೋಗಿ ಮುಂದಿನ ಕಾರ್ಯಕಲಾಪಗಳನ್ನು ಮಾಡಿಕೊಳ್ಳುವುದಕ್ಕೆ ನಮಗೆ ಅವಕಾಶವನ್ನು ಮಾಡಿಕೊಡಬೇಕು.

(ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್‌ಶೆಟ್ಟರ್‌ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಮರಳಿದರು)

+ ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತಿನ ಯಾವುದೇ ಕಾರ್ಯಕಲಾಪವನ್ನು ಮಾಡಿಕೊಂಡು ಹೋಗುವುದಕ್ಕೆ ನಮ್ಮ ಅಭ್ಯಂತರವೇನು ಇಲ್ಲ. ಮಾನ್ಯ ಅಧ್ಯಕ್ಷರೆ ತಾವು ಹೇಳಿದಿರಿ, ಇಡೀ ಕರ್ನಾಟಕದ ಜನತೆ ಇವತ್ತಿನ ದಿವಸ ಸದನದಲ್ಲಿ ಈ ಸದನದ ಕಾರ್ಯಕಲಾಪಗಳನ್ನು ವೀಕ್ಷಣೆಯನ್ನು ಮಾಡುತ್ತಿದ್ದು, ಇಲ್ಲಿ ಏನು ನಡೆಯುತ್ತಿದೆ ಅದನ್ನು ಕೇಳುವಂಥದ್ದು ಇವತ್ತು ನಡೆಯುತ್ತಿದೆ. ಆದರೆ ಇಲ್ಲಿ ಸರ್ಕಾರ ಯಾವ ರೀತಿಯಾದ ತಪ್ಪನ್ನು ಮಾಡುತ್ತಿದೆ, ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಯಾವ ರೀತಿಯಾಗಿ ಜನರ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ, ತನ್ನ ರಾಜಕೀಯ ಇಚ್ಛಾಶಕ್ತಿಯ ಸಲುವಾಗಿ ಏನು ಹೇಳಲಿಕ್ಕೆ

ಪ್ರಯತ್ನವನ್ನು ಮಾಡುತ್ತಿದೆ ಅದರ ಬಗ್ಗೆ ನಾವು ಇವತ್ತು ಜನತೆಯ ಮುಂದೆ ಹೇಳಬೇಕಾಗುತ್ತದೆ. ಅದಕ್ಕಾಗಿ ನಾವು ಸರ್ಕಾರದ ಈ ನೀತಿಯನ್ನು ವಿರೋಧಿಸಿ ಪ್ರತಿಭಟನೆ ಮಾಡಿ ಖಂಡಿಸಬೇಕಾಗುತ್ತದೆ. ಹಲವಾರು ಬಿಲ್‌ಗಳು ಇಲ್ಲಿ ಬರಬಹಹುದು ಆದರೆ ನಾವು ಎಲ್ಲ ಬಿಲ್‌ಗಳಿಗೆ ಈ ರೀತಿಯಾದ ಪ್ರತಿಭಟನೆಯನ್ನು ಮಾಡುತ್ತಿಲ್ಲ. ಈ ಒಂದು ಬಿಲ್‌ಗೆ ನಾವು ಗಂಭೀರವಾಗಿ ಏಕೆ ಪ್ರತಿಭಟನೆ ಮಾಡುತ್ತಿದ್ದೇವೆ ಎಂದರೆ ಮೂಲಭೂತವಾಗಿ ಪ್ರಜಾತಂತ್ರ ವ್ಯವಸ್ಥೆಗೆ ಪೂರಕವಾಗಿ ಇಲ್ಲವೆನ್ನುವುದು ಹಾಗೂ ಪ್ರಜಾತಂತ್ರದ ವ್ಯವಸ್ಥೆಗೆ ಧಕ್ಕೆ ತರುವಂಥದ್ದು ಜನತೆಗೆ ರಾಜಕೀಯವಾಗಿ ತಮ್ಮದೇ ಆದಂತಹ ಆಸೆಆಕಾಂಕ್ಷೆಗಳಿಗೆ ಸರ್ಕಾರ ಒತ್ತಡವನ್ನು ಹೇರುವುದಕ್ಕೆ ಹೊರಟಿರುತ್ತದೆ. ಕೆಲವೊಂದು ರಾಜಕೀಯ ಹಿತಾಸಕ್ತಿಯನ್ನು ಕಾಪಾಡಿಕೊಂಡು ಹೋಗುವ ಸಲುವಾಗಿ ತಮ್ಮ ಕಾರ್ಯಕರ್ತರ ರಾಜಕೀಯ ಬೆಂಬಲಿಗರ ಪ್ರಚೋದನೆಗೆ ಒಳಗಾಗಿ ಈ ರೀತಿಯಾದ ಬಿಲ್ಲನ್ನು ತರುತ್ತಿದ್ದಾರೆ. ಮಾನ್ಯ ಹಿರಿಯ ಸಚಿವರಾದ ಶ್ರೀ ಫೋರ್ಪಡೆಯವರು ತಮ್ಮ ಆತ್ಮಸಾಕ್ಷಿಯಾಗಿ ಈ ಪ್ರಶ್ನೆಯನ್ನು ಮಾಡಿಕೊಳ್ಳಲಿ, ಈ ಸದನದ ಮುಂದೆ ತಂದಿರುವ ಬಿಲ್ ಸರಿಯಾದ ರೀತಿಯಲ್ಲಿ ಇದೆಯೇ ಎನ್ನುವುದನ್ನು ಅವರ ಆತ್ಮಕ್ಕೆ ಪ್ರಶ್ನೆ ಮಾಡಿಕೊಳ್ಳಲಿ. ಬಹುಶಃ ಅದು ಮಾನ್ಯ ಫೋರ್ಪಡೆಯವರ ಮನಸ್ಸಿಗೆ ಸರಿಯಾದುದು ಆಗುವುದಿಲ್ಲ, ಅದಕ್ಕಾಗಿ ಇಂತಹ ಒಂದು ವಿಷಮ ಪರಿಸ್ಥಿತಿಯಲ್ಲಿ ಮೂಲಭೂತವಾಗಿ ನಾವು ಈ ಬಿಲ್ಲನ್ನು ವಿರೋಧ ಮಾಡುತ್ತಿದ್ದೇವೆ. ಸರ್ಕಾರದ ಈ ಒಂದು ಪ್ರಜಾತಂತ್ರ ವಿರೋಧವನ್ನು ನಾವು ಪ್ರತಿಭಟನೆ ಮಾಡಬೇಕಾಗಿದೆ, ನಿನ್ನೆ ಕೂಟ್ಟಿರುವ ರೂಲಿಂಗ್‌ಗೆ ನಮ್ಮ ತಕರಾರು ಏನು ಇಲ್ಲ. ಆದರೆ ಸರ್ಕಾರದ ನೀತಿ ಏನು ಇದೆ, ಅದರ ಬಗ್ಗೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಇವತ್ತು ಜನತೆಗೆ ಇದರ ಬಗ್ಗೆ ಸೂಚನೆ ಹೋಗುತ್ತಿದೆ, ಇವತ್ತು ಪ್ರಜಾತಂತ್ರದ ವಿರುದ್ಧ ಸರ್ಕಾರ ನಡೆದುಕೊಂಡರೆ ಇವತ್ತು ಪ್ರತಿಪಕ್ಷದವರು ಪ್ರತಿಭಟನೆ ಮಾಡುತ್ತಾರೆನ್ನುವ ಬಗ್ಗೆ ಜನರಿಗೆ ಸೂಚನೆ ಹೋಗಬೇಕಾಗುತ್ತದೆ. ಅದಕ್ಕಾಗಿ ಇವತ್ತು ನಮ್ಮ ಪ್ರತಿಭಟನೆಯಾಗಿದೆ.

ಅಧ್ಯಕ್ಷರು: ನೀವು ಸದನದಲ್ಲಿ ಮಾಡುತ್ತಿರುವ ಪ್ರತಿಭಟನೆಗೆ ನಮ್ಮ ವಿರೋಧವೇನು ಇಲ್ಲ. ಪ್ರತಿಭಟನೆಗೆ ವಿರೋಧ ವ್ಯಕ್ತಪಡಿಸುವುದು ನಾನಾ ರೀತಿ ಇದೆ, ಬಾಪಿಗೆ ಬಂದಿರುವದು ಇದು ಕೊನೆಯ ಅಸ್ತ್ರ. ಈಗ ಬಿಲ್ ಮೂವ್ ಮಾಡಿರುವುದರಿಂದ ಅದರ ಬಗ್ಗೆ ಮಾತನಾಡಿ, ಆಮೇಲೆ ಬೇಕಾದರೆ ನೋಡೋಣ, ನೀವು ಮಾತನಾಡದೆ ಕೊನೆಯ ಅಸ್ತ್ರವನ್ನು ಮೊದಲೇ ಉಪಯೋಗಿಸಿದರೆ ಹೇಗೆ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಇತರ ಗೌರವಾನ್ವಿತ ಸದಸ್ಯರುಗಳು ಈ ಪಂಚಾಯಿತಿ ಚುನಾವಣೆಗೆ ತಂದಿರುವ ತಿದ್ದುಪಡಿ ವಿಧೇಯಕದ ಬಗ್ಗೆ ಅವರಿಗೆ ತೀವ್ರವಾದಂತಹ reservation ಇದೆ ಎನ್ನತಕ್ಕಂತಹದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ.

1993ನೇ ಇಸವಿಯಲ್ಲಿ ಏನು ಈ ಪಂಚಾಯಿತಿ ವಿಧೇಯಕ ಅಂದಿನ ವಿಧಾನಸಭೆಯಲ್ಲಿ ಪಾಸಾಯಿತು, ಆ ಚೌಕಟ್ಟಿನಲ್ಲೇ ಚುನಾವಣೆಗಳು ನಡೆಯಬೇಕು ಎನ್ನುವಂಥದ್ದು ಅದನ್ನು ನಾವು ಇಟ್ಟುಕೊಂಡಿರುವ ವಿಶ್ವಾಸ, ಅದರಲ್ಲಿ ನಿಮಗೆ ನಂಬಿಕೆ ಇಲ್ಲದಿರಬಹುದು. ಅದನ್ನೇ ನಾವು ಜನಗಳಿಗೆ ಹೇಳಿದ್ದೇವೆ, ಮಾನ್ಯ ಸದಸ್ಯರೊಬ್ಬರು ಹೇಳಿದರು, ನಾವು ಜನಗಳಿಗ ಹೇಳಿದ್ದೆವು, ಆದ್ದರಿಂದ ನಾವು ನಮ್ಮ ದನ್ನು ಮುಂದುವರಿಸುತ್ತಿದ್ದೇವೆಂದು ಹೇಳಿದರು. ನಾವು ಜನಗಳಿಗೆ ಹೇಳಿದ್ದೇವೆ, ಆದ್ದರಿಂದ ನಾವು ಮುಂದುವರಿಸಬೇಕಾದದ್ದು ತರ್ಕಬದ್ಧ ವಾದವಾಗಿರತಕ್ಕಂತಹ ವಿಚಾರ. ಈಗ ಘಟನೆಗಳ ಬಗ್ಗೆ ಯಾವ ವಿಶ್ಲೇಷಣೆಯನ್ನು ಮಾಡುವುದಕ್ಕೆ ಹೋಗದೆ ಈಗ ಮಂಡನೆಯಾಗಿರುವ ತಿದ್ದುಪಡಿ ಸಭೆಯ ಆಸ್ತಿಯಾಗಿದೆ. ಇವತ್ತು ಎಷ್ಟು ಹೊತ್ತು ಬೇಕಾದರೂ ಆ ತಿದ್ದುಪಡಿಯ ಬಗ್ಗೆ ನಾವು ಚರ್ಚೆ ಮಾಡೋಣ, ನಿಮ್ಮ ಅನಿಸಿಕೆಗಳ ಬಗ್ಗೆ ನಾವು ಸ್ಪಂದಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ; ಇಲ್ಲ ನೀವು ನಮ್ಮನ್ನು ಕನ್‌ವಿನ್ಸ್ ಮಾಡಿ, ಇಲ್ಲದಿದ್ದರೆ ನಾವು ನಿಮ್ಮನ್ನು ಕನ್‌ವಿನ್ಸ್ ಮಾಡುತ್ತೇವೆ. ಇಬ್ಬರಿಗೂ ಕನ್‌ವಿನ್ಸ್ ಆಗದೆ ಹೋದರೆ ಶಾಸನಸಭೆಗೆ ಬಿಟ್ಟುಬಿಡೋಣ, ಅವರು ಏನು ತೀರ್ಮಾನವನ್ನು ಮಾಡುತ್ತಾರೆನ್ನತಕ್ಕದ್ದು, ಒಟ್ಟಾರೆ ಜನತಂತ್ರದ ಅರ್ಥವೇನೆಂದರೆ, ಒಟ್ಟಿನಲ್ಲಿ ಶಾಸನಸಭೆ ಸಾರ್ವಭೌಮ ಅಧಿಕಾರವನ್ನು ಪಡೆದಿರತಕ್ಕಂಥದ್ದು ಅವರು ಅಂತಿಮವಾಗಿ ಏನು ತೀರ್ಮಾನ ಮಾಡುತ್ತಾರೆ, ಅದು ಕಾನೂನಾಗಿ ಪರಿವರ್ತನೆಯಾಗತಕ್ಕಂಥದ್ದು. ನಾವು ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮೊನ್ನೆ ಮಾಡಿದ್ದೇವೆ. ಕಳೆದ ಎರಡು ವರ್ಷಗಳಿಂದ ನಮಗೆ ಬರಬೇಕಾಗಿದ್ದ ಕೇಂದ್ರ ಸರ್ಕಾರದ ನೂರು ಕೋಟಿ ರೂಪಾಯಿಗಳನ್ನು ಯಾವ ಕಾರಣಕ್ಕೆ ತಡೆಹಿಡಿದಿದ್ದರು ಎನ್ನುವುದಕ್ಕೆ ಗ್ರಾಮಪಂಚಾಯಿತಿ ಚುನಾವಣೆಗಳನ್ನು ನೀವು ಮಾಡಿರಲಿಲ್ಲ. ಇವತ್ತು ನಮಗೆ ಕೇಂದ್ರ ಸರ್ಕಾರದಿಂದ ಮಾಹಿತಿ ಬಂದಿದೆ. ನಿಮಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ತಿಳಿದುಬಂದಿದೆ. ನಾನು ಕಳೆದ ಸಲ ದೆಹಲಿಗೆ ಹೋಗಿದ್ದಾಗ ಶ್ರೀಮಾನ್ ಪಟ್ವಾರ್‌ರವರನ್ನು ಭೇಟಿ ಮಾಡಿದ್ದೆ. ನಮಗೆ ಬರಬೇಕಾಗಿದ್ದ ಹಣವನ್ನು ತಾವು ದಯಮಾಡಿ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಾಗ ಅವರು ಫೈಲ್ ತೆಗೆದು ತೋರಿಸಿದರು. ನೀವು ಗ್ರಾಮಪಂಚಾಯಿತಿ ಚುನಾವಣೆಯನ್ನು ಮಾಡಿರುವುದಿಲ್ಲ, ಯಾವ ಯಾವ ರಾಜ್ಯಗಳು ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮಾಡಿದ್ದಾರೆ ಆ ರಾಜ್ಯಗಳಿಗೆ ಮಾತ್ರ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದರು. ಕರ್ನಾಟಕ ರಾಜ್ಯದಲ್ಲಿ ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮಾಡಿರುವುದಿಲ್ಲ, ಆದ್ದರಿಂದ ನಾವು ಹಣವನ್ನು ಬಿಡುಗಡೆ ಮಾಡಿರುವುದಿಲ್ಲವೆಂದು ಹೇಳಿದರು. ಈಗ ಚುನಾವಣೆಗಳನ್ನು ಮಾಡಿರುತ್ತೀರಿ, ಅದಕ್ಕಾಗಿ ಹಣವನ್ನು ಬಿಡುಗಡೆ ಮಾಡಿದ್ದೇವೆಂಬ ಮಾಹಿತಿಯನ್ನು ಕಳುಹಿಸಿದ್ದಾರೆ. ಕೇಂದ್ರಸರ್ಕಾರಕ್ಕೆ ನಾನು ಈ ಸಮಯದಲ್ಲಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಾವು ಪ್ರತಿಭಟನೆಯನ್ನು ತೋರಿಸಿದ್ದೀರಿ ಇದು ರಾಜ್ಯದ

ಜನತೆಗೂ ಗೊತ್ತಾಗಿದೆ, ಆದ್ದರಿಂದ ಪ್ರತಿಭಟನೆ ಮಾಡಿದ ಮೇಲೆ ನಿಮ್ಮ ಆರ್ಗ್ಯುಮೆಂಟ್ಸ್‌ನ್ನು ಮಾಡಿ ಇದರ ಮೇಲೆ ಹೆಚ್ಚು ಬೆಳಕನ್ನು ಚಲ್ಲಬೇಕು. ಇದರ ಬಗ್ಗೆ ನಾನು ಏನಾದರೂ ಹೇಳಿದರೆ ಮಾನ್ಯ ಜಗದೀಶ್‌ಶೆಟ್ಟರ್‌ರವರು ವ್ಯಂಗ್ಯವೆಂದು ಹೇಳುತ್ತಾರೆ. ಆದ್ದರಿಂದ ನಮಗೆ ಏನಾದರೂ ತಿಳುವಳಿಕೆ ಬರುವುದಾದರೆ ಅದನ್ನು ನಾವು ಹಿಮ್ಮೆಟ್ಟಬಹುದು, ಅದು ಕೂಡ ಸಾಧ್ಯವಿದೆ. ಆ ಅವಕಾಶವನ್ನು ಉಪಯೋಗಿಸಿ ಎಂದು ನಿಮ್ಮಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ಇದರ ಬಗ್ಗೆ ಎಷ್ಟು ಸಮಯ ಬೇಕಾದರೂ ಚರ್ಚೆ ಮಾಡಬಹುದು.

ಅಧ್ಯಕ್ಷರು: ಮಾನ್ಯ ಜಗದೀಶ್‌ಶೆಟ್ಟರ್ ಹಾಗೂ ಮಾನ್ಯ ಸಿಂಧ್ಯಾರವರು ತಮ್ಮ ಸ್ಥಾನಕ್ಕೆ ಹೋಗಬೇಕು.

(ಮಾನ್ಯ ಸಿಂಧ್ಯಾರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹೋದರು)

+ ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಇಂದಿನ ಸಮಯವನ್ನು ಉಪಯೋಗಿಸಿಕೊಂಡು ಹಿಂದಿನ ಸರ್ಕಾರ ಚುನಾವಣೆಯನ್ನು ಮಾಡಿರಲಿಲ್ಲ ಅದಕ್ಕಾಗಿ ನಾವು ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮಾಡದೆ ಇರುವುದರಿಂದ ಕೇಂದ್ರ ಸರ್ಕಾರ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಕೊಡಬೇಕಾಗಿದ್ದ ಹಣವನ್ನು ಹಿಡಿದಿಟ್ಟಿದ್ದಾರೆಂದು ಹೇಳಿದರು. ಇದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಕಾರಣವೇನೆಂದರೆ, ಗ್ರಾಮ ಪಂಚಾಯಿತಿ ಚುನಾವಣೆಗಳು ಬೇರೆ ಬೇರೆ ರಾಜ್ಯಗಳಲ್ಲಿ ಆಗಿರುವುದಿಲ್ಲ. ಬಿಹಾರದಲ್ಲಿ ಚುನಾವಣೆಗಳು ಆಗಿರುವುದಿಲ್ಲ, ಮಾನ್ಯ ಪಾಟ್ವಾರವರ ರಾಜ್ಯವಾದ ಮಧ್ಯಪ್ರದೇಶದಲ್ಲಿ ಚುನಾವಣೆಗಳು ಆಗಿರುವುದಿಲ್ಲ, ಯಾವುದೇ ಕಾರಣದಿಂದ ಕೇಂದ್ರಸರ್ಕಾರಕ್ಕೆ ಹಣವನ್ನು ತಡೆಹಿಡಿಯಲಿಕ್ಕೆ ಕಾನೂನಿನಲ್ಲಿ ಅವಕಾಶವಿರುವುದಿಲ್ಲ. / ಬೇರೆ ಯಾವುದಾದರೂ ಟೆಕ್ನಿಕಲ್ ರೀಸನ್ಸ್‌ಗೆ ಉಪಯೋಗಿಸಿಕೊಂಡಿಲ್ಲವೆಂಬ ಕಾರಣದಿಂದ ತಡೆಹಿಡಿದಿರುವುದು ಆಗಿರಬಹುದು.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಸಿಂಧ್ಯಾರವರಿಗೆ ಅದರ ವಿವರವುಳ್ಳ ಮಾಹಿತಿಯನ್ನು ಕೊಟ್ಟು ಕಳುಹಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾವು ನಿನ್ನೆ ಧರಣಾ ಮಾಡಿರತಕ್ಕಂತದ್ದು ಸರ್ಕಾರ ನಮ್ಮ ಮಾತನ್ನು ಕೇಳಲಿಲ್ಲವೆನ್ನತಕ್ಕ ಕಾರಣಕ್ಕಾಗಿ ಮಾತ್ರ, ತಮ್ಮ ಬಗ್ಗೆ ಅಲ್ಲ. ನಮ್ಮ ಮಾತುಗಳನ್ನು ಮೊದಲು ಕೇಳಿ ನಂತರ ಬಿಲ್ಲನ್ನು ಮೂವ್ ಮಾಡಿ ಎಂದು ನಾವು ಹೇಳಿದರೆ ಅದನ್ನು ಕೇಳುವುದಕ್ಕೆ ಸರ್ಕಾರ ತಯಾರಿಲ್ಲವೆಂದರೆ ಈಗ ಮಾನ್ಯ ಸಭಾನಾಯಕರು ಹೇಳುತ್ತಾರೆ ಮಾನ್ಯ ವಿರೋಧಪಕ್ಷದ ನಾಯಕರು ಕೊಡತಕ್ಕಂತಹ ಸಲಹೆಗಳನ್ನು ಕನ್ಸಿಡರ್ ಮಾಡುವುದಕ್ಕೆ ತಯಾರಾಗಿದ್ದೇವೆಂದು ಅವರು ಈಗ

ಹೇಳುತ್ತಿದ್ದಾರೆ. ನಾವು ಹೇಳಿದ್ದಾದರೂ ಏನು? ನಾವು ಕುಳಿತುಕೊಂಡು ಈ ಬಿಲ್ ಬಗ್ಗೆ ಚರ್ಚೆ ಮಾಡೋಣ ಅನೇಕ ಸಂದರ್ಭಗಳಲ್ಲಿ ಇಂತಹ ಉದಾಹರಣೆಗಳನ್ನು ತೆಗೆದು ನೋಡಿದರೆ ಇತಿಹಾಸದಲ್ಲಿ ಇಂತಹ ಉದಾಹರಣೆಗಳು ಬಹಳ ಇವೆ. ಇದನ್ನು ಮಂಡಿಸತಕ್ಕಂತದ್ದು ಸರಿಯಲ್ಲ. ನೀವು ಇಲ್ಲಿ ಒಂದು ರಾಜಕೀಯ ಪಕ್ಷದಿಂದ ಗೆದ್ದು ಬಂದಂಥವರು, ನಾವು ಒಂದು ರಾಜಕೀಯ ಪಕ್ಷದಿಂದ ಗೆದ್ದು ಬಂದಿರುತ್ತೇವೆ. ನಿಮ್ಮ ಕಾರ್ಯಕರ್ತರ ಭವಿಷ್ಯವನ್ನು ನೀವು ಎತ್ತಿ ಹಿಡಿಯಬೇಕಾಗುತ್ತದೆ, ನಮ್ಮ ಕಾರ್ಯಕರ್ತರ ಭವಿಷ್ಯವನ್ನು ನಾವು ಎತ್ತಿ ಹಿಡಿಯಬೇಕಾಗುತ್ತದೆ. ಬಿಜೆಪಿ ಅಥವಾ ಜನತಾದಳವಾಗಿರಬಹುದು, ಇದನ್ನು ಯಾವುದೇ ರಾಜಕೀಯ ಪಕ್ಷದ ಭೇದಭಾವವಿಲ್ಲದೆ ಮಾಡಬೇಕೆಂದು ಬಂದಾಗ ಆಡಳಿತ ಪಕ್ಷದವರು ಇದನ್ನು ನಾವು ಮಾಡಿಯೇ ಮಾಡುತ್ತೇವೆಂದು ಹೇಳುವುದಾದರೆ, ಇದನ್ನು ನಾವು ಮಾಡತಕ್ಕಂಥದ್ದು ಸರಿಯಾಗಿದೆ ಎನ್ನುವಂತದ್ದು, ಆಡಳಿತದಲ್ಲಿ ಇರತಕ್ಕಂಥ ಭಿನ್ನಾಭಿಪ್ರಾಯಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಇಷ್ಟೇ ಹೇಳುತ್ತೇನೆ, ಈ ಬಿಲ್ಲನ್ನು ಮಂಡಿಸಿರತಕ್ಕಂಥದ್ದು ತಪ್ಪು. ಇದರ ಅವಶ್ಯಕತೆ ಇರಲಿಲ್ಲ. ನಿಮ್ಮ ಪಕ್ಷವನ್ನು ಹಾಳು ಮಾಡಿಕೊಳ್ಳತಕ್ಕಂತಹ ಒಂದು ವಿಧಾನ, ಇವತ್ತು ಏನೇನು ಆಗುತ್ತಿದೆಂದರೆ ಇದರಿಂದಾಗಿ ನೀವು ಯಾರಿಗೂ ಸ್ಯಾಟಿಸ್‌ಫ್ಯಾಕ್ಷನ್ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಎಲೆಕ್ಷನ್ ಕಮಿಷನ್ ಇದ್ದರೆ ಅವರು ಕಾನೂನಿನ ಪ್ರಕಾರ ಮಾಡಿದ್ದಾರೆಂದು ಭಾವನೆ ಬರುತ್ತಿತ್ತು. ಇದನ್ನು ಮಂಡಿಸತಕ್ಕಂತಹ ಅವಶ್ಯಕತೆಯಾದರೂ ಏನಿತ್ತು? ಅದಕ್ಕಾಗಿ ಈ ಸರ್ಕಾರದ ಧೋರಣೆ ಸರಿಯಾಗಿರುವುದಿಲ್ಲ, ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು, ಅದಕ್ಕಾಗಿ ನಾವು ನಮ್ಮ ಧರಣಿಯನ್ನು ಮುಂದುವರಿಸುತ್ತೇವೆ.

(ಶ್ರೀ ಪಿ.ಜಿ.ಆರ್.ಸಿಂಧ್ಯಾರವರು ಮತ್ತೆ ಸದನದ ಬಾವಿಗೆ ಬಂದರು)

+ ಶ್ರೀ ಕೆ.ಹೆಚ್.ರಂಗನಾಥ್ (ಮಾನ್ಯ ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಒಂದು ಹೊಸ ವಿಚಾರವನ್ನು ಈ ಸಭೆಯ ಮುಂದಿಡುತ್ತಿದ್ದಾರೆ. ಸರ್ಕಾರ ಯಾವ ಕಾನೂನನ್ನು ತರಬೇಕಾಗುತ್ತದೆ, ಯಾವುದನ್ನು ಮಂಡನೆ ಮಾಡಬೇಕಾಗುತ್ತದೆ, ಆಗ ನಮ್ಮನ್ನು ಕೇಳಬೇಕಾಗುತ್ತದೆ ಎನ್ನುವ ಧಾಟಿಯಲ್ಲಿದೆ. ನಾವು ಈ ಕಾನೂನನ್ನು ಈ ಸಭೆ ಮಾಡಿದೆ, ಕಾನೂನನ್ನು ಈ ಸಭೆಯಲ್ಲಿ ಪಾಸು ಮಾಡಲಾಗಿದೆ, ಇದನ್ನು ಕಾಂಗ್ರೆಸ್ ಪಕ್ಷ ಅಥವಾ ಬೇರೆಯವರು ಮಾಡಿರತಕ್ಕಂಥದ್ದು ಅಲ್ಲ. ಇದರಲ್ಲಿ ನಾವು ಸ್ಪಷ್ಟವಾಗಿ ಪ್ರಸ್ತಾಪ ಮಾಡಿರುತ್ತೇವೆ. ಬಿಲ್ಸ್‌ಗೆ ಯಾವ ರೀತಿಯಾಗಿ ನಾವು ಆದ್ಯತೆಯನ್ನು ಕೊಡಬೇಕಾಗುತ್ತದೆ, ಸಾಮಾಜಿಕ ದೃಷ್ಟಿಯಿಂದ ಜನರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಯಾವ ಕಾನೂನನ್ನು ತರಬೇಕು, ಯಾವ ಕಾನೂನನ್ನು ಬಿಡಬೇಕು ಎನ್ನತಕ್ಕಂತಹದ್ದು ಸರ್ಕಾರದ ವಿವೇಚನೆಗೆ ಬಿಟ್ಟ ವಿಚಾರ. It comes before the House in the form of a motion. ಒಂದು ಬಿಲ್ ಬರುತ್ತಿದೆ, ಇದನ್ನು ನಾವು 3 ಹಂತದೊಳಗೆ ತೆಗೆದುಕೊಳ್ಳುತ್ತೇವೆ. One is introduction stage,

the other is the consideration stage and the third is the voting stage. ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ಏನು ಮಾಡಬೇಕು ಅಂತ ಹೇಳಿ ರೂಲ್-29ರಲ್ಲಿ ಸ್ಪಷ್ಟವಾಗಿ ಹೇಳಿದೆ, ಅದನ್ನು ನಾವು ಮಾಡಬೇಕಾದರೆ ತಮ್ಮ ಅಪ್ಪಣೆಯನ್ನು ಮಾತ್ರ ತೆಗೆದುಕೊಳ್ಳುತ್ತೇವೆ. ಮತ್ತೆ ಮುಂದೆ ಇದೆ, supposing for argument sake, that particular piece of legislation is opposed to public, ಯಾವುದಕ್ಕೆ ದೃಷ್ಟಿಯಿಂದ ವಿರೋಧವಾಗಿದ್ದರೂ, ವಿರೋಧಪಕ್ಷದವರಿಗೆ ಆಗಲಿ, ಪಬ್ಲಿಕ್ ಒಪಿನಿಯನ್‌ಗೆ ಕಳುಹಿಸಬಹುದು ಎಂದು ಮೂವ್ ಮಾಡುವುದಕ್ಕೂ ಅವಕಾಶವಿದೆ. ಡಿಸ್‌ಕಸ್ ಮಾಡುವುದಕ್ಕೆ ಅಧಿಕಾರವಿದೆ, ಕನ್ಸಿಡರೇಷನ್ ಸ್ಟೇಜ್‌ಗೆ ಬಂದಾಗ ಪ್ರತಿ ಕ್ಲಾಜ್, ಪ್ರತಿ ವರ್ಡ್ಸ್ ಯಾವುದೇ ಒಂದು(ಕಾಮ)ವನ್ನು ವಿಚಾರ ಮಾಡುವುದಕ್ಕೆ ಅವಕಾಶವಿರುತ್ತದೆ. ಹೀಗಿರುವಾಗ ನಾವು ಅವರನ್ನು ಕೇಳಿ ಬಿಲ್ ತರಬೇಕು, ಅದರ ಸಾರಾಂಶವನ್ನು ನಮಗೆ ಮೊದಲು ತಿಳಿಸಬೇಕು, ಅದನ್ನು ಒಪ್ಪಿದ ಮೇಲೆ it should come only in that form, then you should frame the law, ನಂತರ ಇದು ಲಾ ಡಿಪಾರ್ಟ್‌ಮೆಂಟ್‌ಗೆ ಹೋಗಿ ಮಾಡಬೇಕು. ಇದೆಲ್ಲಾ ಮಾಡತಕ್ಕಂಥದ್ದು ಎಲ್ಲಿ ತೊಂದರೆ ಬರುತ್ತದೆಂದರೆ when you hold the whole House into ransom. ಆಗ ನಮಗೆ ಅಂತಹ ಪರಿಸ್ಥಿತಿ ನಮಗೆ ಬರುತ್ತದೆ. ಹಾಗಾದರೆ ಯಾವ ಕಾನೂನಿನಲ್ಲಿ ಸಾಧ್ಯವಾಗುತ್ತದೆ. ಇವತ್ತು ಏನಾಗಿದೆ ಎಂದರೆ ಇಡೀ ರಾಷ್ಟ್ರದಲ್ಲಿ ಪಂಚಾಯಿತಿ ಕಾನೂನನ್ನು ನಾವು ಮಾಡದೆ ಇದ್ದುದರಿಂದ, ಚುನಾವಣೆಗಳನ್ನು ಮಾಡದೆ ಇರುವುದರಿಂದ though the particular subject was a State subject, the Government of India has thought it fit to amend the constitution though it was not within their jurisdiction. ರಾಜ್ಯಾಂಗದಲ್ಲಿ ಪಂಚಾಯಿತಿ ವ್ಯವಸ್ಥೆ ಬರತಕ್ಕಂಥದ್ದು ಬೇರೆ ಬೇರೆ Directive Principleನಲ್ಲಿ ಬರತಕ್ಕಂಥದ್ದು ಸ್ಟೇಟ್ ಲಿಸ್ಟ್‌ನಲ್ಲಿ ಬರತಕ್ಕಂಥದ್ದು ಇದ್ದರೂ ಕೂಡ 5 ವರ್ಷಕ್ಕೆ ಒಂದು ಸಲ ಚುನಾವಣೆ ಮಾಡಬೇಕೆಂದು ಅವರು ಮಾಡಿದ್ದಾರೆ. ಹೀಗಿರುವಾಗ ಅದಕ್ಕೆ ಅನುಗುಣವಾಗಿ ಇವತ್ತು ಕಾನೂನು ಬಂದಿರುತ್ತದೆ. ಆ ಕಾನೂನು ಜಾರಿಗೆ ಕೊಡುವಾಗ ಕಷ್ಟಸುಖಗಳು ಬರುತ್ತವೆ, ಅದನ್ನು ನಿವಾರಣೆ ಮಾಡತಕ್ಕಂಥದ್ದನ್ನು ಮತ್ತು ಆಡಳಿತ ಮಾಡತಕ್ಕಂಥದನ್ನು ಮಾಡಿಕೊಳ್ಳುತ್ತದೆ. ಉದಾಹರಣೆಗಾಗಿ 1993ನೇ ಇಸವಿಯಲ್ಲಿ ಕಾನೂನು ಮಾಡುವಾಗ ಮಾನ್ಯ ಸಚಿವರು ಮಾಡಿದ್ದರು. . ಆಗ ಮಾನ್ಯ ಸಿಂಧ್ಯಾರವರು ಅಧಿಕಾರದಲ್ಲಿದ್ದರು. Their government, in its wisdom, thought it fit to amend it. They have amended it. But, after seeing the pros and cons, the present government which has also said in its election manifesto, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾಗಿ

ಹೇಳಿದ್ದಾರೆ. we have said it before the people. We have put it before the people, we have got the mandate of the people. ಹೀಗಿರುವಾಗ - ಅದಕ್ಕೆ ನಾವು ಸಂಬಂಧಪಟ್ಟಂತೆ ತಿದ್ದುಪಡಿಯನ್ನು ತರುವಾಗ, at this point of time, when the Bill is to be introduced in this august House, to say 'I am not going to allow it.' ನಾವು ಧರಣಿ ಮಾಡುತ್ತೇವೆಂದು ಹೇಳುವುದಾದರೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವಂತಹ ನಮ್ಮಗಳಿಗೆ ಇದು ಸರಿಹೋಗುತ್ತದೆಯೇ? ಇದನ್ನು ತಾವುಗಳು ವಿಚಾರ ಮಾಡಬೇಕು. ಮಾನ್ಯ ಸದಸ್ಯರ ವಿವೇಚನೆಗೆ ಈ ವಿಷಯವನ್ನು ನಾನು ಬಿಡುತ್ತೇನೆ. ಈ ಮಾತನ್ನು ಈ ಸದನದ ವಿವೇಚನೆಗೆ ಬಿಡುತ್ತೇನೆ. ಹೀಗೆ ಮಾಡುವುದಾದರೆ ನನಗೆ ಏನೋ ಬರುತ್ತದೆ ನಾನು ಮನೆಯಲ್ಲಿರುತ್ತೇನೆ, ನನ್ನ ಮನಸ್ಸಿಗೆ ಏನೋ ಒಂದು ಡೌಟ್ ಬರುತ್ತದೆ. So, I can mobilise about 40 to 50 people come lve and do all sorts of these things - then how are we to run this House? What is the sanctity? ಈ ರೀತಿಯಾದರೆ ನಾವು ಕಾನೂನನ್ನು ತರುವುದು ಹೇಗೆ? ಮತ್ತು ನಾವು ಆಡಳಿತವನ್ನು ಮಾಡುವುದಾದರೂ ಹೇಗೆ? ಸಾಮಾಜಿಕ ನ್ಯಾಯವನ್ನು ಕೊಡುವುದಾದರೂ ಹೇಗೆ? ಇದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಅವರು ಹಿರಿಯರಿದ್ದಾರೆ, ಒಂದಲ್ಲ ಅನೇಕಸಲ ಆಡಳಿತವನ್ನು ನಡೆಸಿದವರಾಗಿದ್ದಾರೆ, ನಿರ್ವಹಣೆಯಿಂದ ಕೆಲಸವನ್ನು ಮಾಡಿದವರಾಗಿದ್ದಾರೆ. ಮಾನ್ಯ ಎಸ್.ಎಸ್.ಪಾಟೀಲ್‌ರವರು ಯಾವುದೋ ಒಂದು ವಿಚಾರದಲ್ಲಿ ಲೋಕಸಭೆಯಲ್ಲಿ ಕೂಡ ಪ್ರಧಾನಿಯವರು ಸಕರಾಮ್ ವಿಚಾರದಲ್ಲಿ ಲೋಕಸಭೆಯನ್ನು ಹೋಲ್ಡ್ ಮಾಡಿದ್ದರಿಂದ ಬೇರೆಯವರು ಅದನ್ನು ಮಾಡತಕ್ಕಂತಹ ಪರಿಸ್ಥಿತಿ ಇಂತಹ ಪೋಡಿಯಂಗೂ ಕೂಡ ಬರುತ್ತಿರಲಿಲ್ಲ. ನಾನು ಒಂದು ಸಲ ಲೋಕಸಭೆಯಲ್ಲಿದ್ದ, ಮಾನ್ಯ ಮುಖ್ಯಮಂತ್ರಿಗಳು ಬಹಳ ಸಲ ಇದ್ದರು. They were not even allowed to get into the podium.

(ಗೊಂದಲ)

11.40 ಎ.ಎಂ.

ಹಾಗಾದರೆ ಈ ಮನೆಯ ಸದಸ್ಯರುಗಳು ಏನು ಬೇಕಾದರೂ ಮಾಡುವುದಾದರೆ ಈ ಸಭೆಯೇ ಇರಬೇಕಾದ್ದಿಲ್ಲ. Then let us not have this book at all. ಅಧ್ಯಕ್ಷರೆ, ಈ ಪುಸ್ತಕಾನೇ ಬೇಕಾಗಿಲ್ಲ. ಅದನ್ನು ತೆಗೆದುಬಿಡೋಣ. ಅಧ್ಯಕ್ಷರೆ, ತಾವು ದಯಮಾಡಿ ಈ ಕಡೆಗೆ ಗಮನ ಕೊಡಬೇಕು. ಹಾಗೆ ಆಗುವುದಾದರೆ, ಈ ಪುಸ್ತಕ ನಮಗೆ ಬೇಕಾಗಿಲ್ಲ. ಇವತ್ತಿನಿಂದ let us pass unanimously a

resolution that we are not following this book at all. ಎಲ್ಲರೂ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು ಈ ಸಭೆಯಲ್ಲಿ. ಇಲ್ಲದೇ ಹೋದರೆ ಹೇಗಾಗುತ್ತದೆ? ನಾನು ದಯಮಾಡಿ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ವಿನಂತಿ ಮಾಡಿದ್ದಾರೆ. ನಾವೆಲ್ಲರೂ ಕೂಡ we are of the same opinion. You should cooperate. You have your say. ಕನ್‌ವಿನ್ಸ್ ಮಾಡಿ. After all what is democracy? Democracy is by discussions only. You convince us. ಮುಕ್ತ ಮನಸ್ಸಿನಿಂದ ನಾವು ವಿಚಾರ ಮಾಡುತ್ತೇವೆ. Consideration stageನಲ್ಲಿ Every word of the Bill can be discussed. Amendment can be moved, ರಾತ್ರಿಯಾಗುವವರೆಗೆ ತಾವು ಮೂವ್ ಮಾಡಿ. If it is possible every word of the Bill can be considered by this august House. ಅದನ್ನು ಬಿಟ್ಟು ನಾವು ಕನ್ಸಿಡರೇಷನ್ ಸ್ಟೇಜ್‌ನಲ್ಲಿಯೇ ಅವಕಾಶ ಕೊಡುವುದಿಲ್ಲವೆಂದರೆ, ಆ ರೀತಿ ಮಾಡುವುದು ನ್ಯಾಯಸಮ್ಮತವಾಗಿರತಕ್ಕದ್ದಲ್ಲ. ನಾನು ಕೂಡ ಮಾನ್ಯ ಮಂತ್ರಿಗಳ ವಿನಂತಿಯ ಜೊತೆಗೆ ಕೈಗೂಡಿಸಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. I was also the Speaker for some period. ಮಾನ್ಯ ದಿವಂಗತ ದೇವರಾಜ ಅರಸ್‌ರವರು ಇಲ್ಲಿದ್ದರು. We have seen these things. ನಾವು ಈಗ ಯಾವ ಸ್ಟೇಜಿಗೆ ಬಂದಿದ್ದೇವೆಂದರೆ, ಇಲ್ಲಿಗೆ ಬರದೇ ಇರತಕ್ಕ ರೀತಿಯಲ್ಲಿ ನಾವೇ ಸ್ವಯಂಪ್ರೇರಿತರಾಗಿ ಒಂದು ನಿಯಂತ್ರಣವನ್ನು ಹಾಕಿಕೊಳ್ಳತಕ್ಕ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಈ ಸಭೆಯಲ್ಲಿ ಪಾಸ್ ಮಾಡಿಕೊಳ್ಳಬೇಕು. For no account we should come here and sit, do these things ಇದನ್ನು ಈ ಸಭೆಯ ಮುಂದೆ ಮಾಡಿಕೊಳ್ಳಲೇ ಬೇಕಾಗುತ್ತದೆ. ನಾನು ಈ ಸಭೆಗೆ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇಲ್ಲದೇ ಹೋದರೆ ನಾವು ಸಭೆ ನಡೆಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. Then this can never be a parliamentary democracy. It can only be a "mobocracy".

+ ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಈಗ ಬಹುಶಃ ತಮ್ಮ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ಆ ಕುರ್ಚಿಯ ಬಗ್ಗೆ ಅಲ್ಲಿಂದ ಬಂದ ಆದೇಶದ ಬಗ್ಗೆ ಪೂರ್ತಿ ಅದನ್ನು ಪಾಲನೆ ಮಾಡತಕ್ಕ ನಮ್ಮ ಕರ್ತವ್ಯಗಳನ್ನು ನಾವು ಮಾಡುತ್ತಿದ್ದೇವೆ. ಆದರೆ ನಮಗೆ ಇವತ್ತು ಮನಸ್ಸಿಗೆ ನೋವಾಗುವಂತಹದ್ದು ಆಡಳಿತ ಪಕ್ಷದಲ್ಲಿ ಕೂತವರು ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆ ಮತ್ತೊಂದರ ಬಗ್ಗೆ ಬಾರೀ ವಿಚಾರಗಳನ್ನು ಮಾತನಾಡಿದರು. ನಾವು ನಿನ್ನೆ ಕೂಡ ಕಾನೂನಿನ ಚೌಕಟ್ಟಿನೊಳಗೆ ರೂಲ್ 81ರ ಕೆಳಗೆ ಈ ಸಂದರ್ಭದಲ್ಲಿ ಏನು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ತಮ್ಮನ್ನು ಕನ್ವಿನ್ಸ್ ಮಾಡಬೇಕೆನ್ನುವ ಹಿತದೃಷ್ಟಿಯಿಂದ ಮಾನ್ಯ ಸಿಂಧ್ಯಾರವರು ಮತ್ತು

ಶೆಟ್ಟರ್‌ರವರು ಪ್ರಯತ್ನಗಳನ್ನು ಮಾಡಿದರು. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮಗೆ ಜಾಸ್ತಿ ಬಹುಮತ ಇದೆಯೆಂದು ಹೇಳುವಂತಹ ದೃಷ್ಟಿಯಿಂದ ನಾವು ನಡೆದದ್ದೆ ದಾರಿ ನಾವು ಹೋದದ್ದೆ ಒಂದು ರಾಜಮಾರ್ಗವೆಂದು ಹೇಳುವಂತಹ ಒಂದು ಭಾವನೆಯಿಂದ ನಮ್ಮ ವಾದಗಳನ್ನು ತಾವು ಆಲಿಸಲಿಕ್ಕೆ ಅವಕಾಶವನ್ನು ಕೊಡದ ಪರಿಸ್ಥಿತಿ ನಿರ್ಮಾಣ ಮಾಡಿದ ಬಗ್ಗೆ ನಿಜವಾಗಿ ನಮ್ಮ ಮನಸ್ಸಿಗೆ ತುಂಬಾ ನೋವು ಇದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನೀವು ಚರ್ಚೆ ಮಾಡಿಯೆಂದು ಇವರು ಹೇಳುತ್ತಾರೆ. ನಾವು ಸಮಯವನ್ನು ನಿಗದಿಪಡಿಸೋಣ ನಾವು ಕೇಳಿಕೊಳ್ಳಲಿಕ್ಕೆ ತಯಾರಾಗಿದ್ದೇವೆ ಅದಕ್ಕೆ ಏನು ಅಮೆಂಡ್‌ಮೆಂಟ್ಸ್‌ಗಳನ್ನು ತನ್ನಿ ಅದು ಕನ್ವಿನ್ಸ್ ಆದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಕನಿಷ್ಟ ಸೌಜನ್ಯಕ್ಕಾದರೂ ಮಾನ್ಯ ಶೆಟ್ಟರ್‌ರವರು ಮತ್ತು ಸಿಂಧ್ಯಾರವರು ಇಂತಹ ವಿಚಾರಗಳನ್ನು ಹೇಳಲಿ, ಇದರಲ್ಲಿ ಮಂಡನೆ ಮಾಡುವಂತಹ ಸಂದರ್ಭಗಳಲ್ಲಿ ಮಂಡನೆಗೆ ಅರ್ಹವಲ್ಲವೆಂದು ಹೇಳುವಂತಹ ವಿಚಾರವನ್ನು ಹೇಳಲಿಕ್ಕೆ ನಾವು ಪ್ರಯತ್ನಪಟ್ಟರೂ ಕೂಡ ಅವರು ಬಿಡಲಿಲ್ಲ ಅದರಿಂದ ನಮಗೆ ಬೇಸರ ಆದದ್ದು. ನಾವು ತುಂಬಾ ಪ್ರಯತ್ನಪಟ್ಟೆವು. ಅವರೆಲ್ಲ ನಮ್ಮನ್ನು ಕೂರಿಸಲಿಕ್ಕೆ ನೋಡಿದರು. ಆದರೂ ಕೂಡ ಏನಾಯಿತು ಅಂದರೆ ಯಾವುದೇ ಮಾತುಗಳನ್ನು ಕಡತಕ್ಕೆ ಹೋಗದ ಮತ್ತೊಂದು ಆಗದ ಸಂದರ್ಭಗಳೇ ಆಗಲಿಲ್ಲ. ಈಗ ಕನಿಷ್ಟ ನನ್ನ ಮನಸ್ಸಿಗೆ ಸಂತೋಷವಿರುತ್ತಿತ್ತು, ತಾವು ಅದನ್ನೆಲ್ಲ ಆಡಳಿತ ಪಕ್ಷದವರು ಕೇಳುವಂತಹ ವ್ಯವಸ್ಥೆಯನ್ನು ಕಲ್ಪನೆ ಮಾಡಿಕೊಟ್ಟಿದ್ದರೆ ನಿಜವಾಗಿ ಇವರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಗೌರವವಿತ್ತು ಎಂದು ನಾನು ಭಾವಿಸುತ್ತಿದ್ದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಗೌರವ ಹೇಗೆ? ತಪ್ಪುಗಳು ಒಪ್ಪುಗಳು ಇರಬಹುದು. ಸದನದಲ್ಲಿ ಒಂದು ಪಕ್ಷ ಬಾರೀ ಬಹುಮತದಿಂದ ಅರಿಸಿ ಬಂತೆಂದರೆ ಅವರು ಮಾಡಿದ್ದನ್ನೆಲ್ಲ ಸಮಾಜ ಒಪ್ಪಿಕೊಳ್ಳಬೇಕು ಇಡೀ ರಾಜ್ಯ ಒಪ್ಪಿಕೊಳ್ಳಬೇಕೆನ್ನತಕ್ಕ ಭಾವನೆ ಸರಿಯಲ್ಲ. ಪ್ರತಿಪಕ್ಷ ಸಣ್ಣದು ಇರಬಹುದು. ಸಣ್ಣದು ಇದ್ದರೂ ಕೂಡ ಅವರ ಗಹನವಾದ ವಿಚಾರಗಳಿಗೆ ಗೌರವವಿರಬೇಕು. ಹಲವಾರು ವಿಚಾರದಲ್ಲಿ ಸಂಖ್ಯೆಯ ಆಧಾರದಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಗೌರವ ಕೊಡಬೇಕು. ನಿಜ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ವಿಷಯಾಧಾರಿತವಾದ ವಿಚಾರಗಳನ್ನು ಕೂಡ, ಮೌಲ್ಯಾಧಾರಿತವಾದ ವಿಚಾರಗಳನ್ನು ಕೂಡ ಯಾವುದೇ ಪ್ರತಿಪಕ್ಷಗಳು ಪ್ರತಿಪಾದನೆ ಮಾಡಿದಾಗ ಅದನ್ನು ತಾಳ್ಮೆಯಿಂದ ಕೇಳುವಂತಹ ವ್ಯವಸ್ಥೆಯನ್ನು ಮಾಡಲಿಲ್ಲವೆನ್ನುವಂತಹ ಬೇಸರ ನಮ್ಮ ಪ್ರತಿಪಕ್ಷಕ್ಕೆ ಇದೆ. ಕನಿಷ್ಟ ಮಾನ್ಯ ಶೆಟ್ಟರ್‌ರವರು ಮತ್ತು ಸಿಂಧ್ಯಾರವರು ಅಷ್ಟು ವಿಚಾರಗಳನ್ನು ಬೇರೆ ಬೇರೆ ರೂಲ್ಸ್ ಆಫ್ ಪ್ರೊಸೀಜರ್ಸ್‌ಗಳನ್ನು ತಮ್ಮ ಮುಂದೆ ಮಂಡನೆ ಮಾಡಬೇಕೆಂದು ಪ್ರಯತ್ನ ಮಾಡಿದಾಗ ನೇರವಾಗಿ ಆ ಭಾಗದಿಂದ ಒಂದು ರೀತಿ ಅವರು ತಯಾರು ಮಾಡಿಕೊಂಡಿದ್ದಾರೆ. ಪ್ರತಿಪಕ್ಷದವರು ಏನು ಮಾತನಾಡಿದರೂ ನಾವು ಗಲಾಟೆ ಮಾಡಬೆಕು ಅವರು ಮಾತನಾಡದ ಹಾಗೆ ಮಾಡಬೇಕೆಂದು ಮಾಡಿದ್ದಾರೆನ್ನುವ ಭಾವನೆಯ ರೀತಿಯಲ್ಲಿ ಕೆಲಸಗಳನ್ನು ಮಾಡುವಂತಹದ್ದನ್ನು ನಾವು ನೋಡಿದ್ದೇವೆ.

ಅದು ನನ್ನ ಮನಸ್ಸಿಗೆ ಬೇಸರ ತಂದಿದ್ದು. ಇವತ್ತು ನಮ್ಮ ಧರಣಿ ಆಡಳಿತ ಪಕ್ಷದ ವ್ಯವಸ್ಥೆ ಮತ್ತು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಡೆಯುವಂತಹ ದಾರಿಯ ಬಗ್ಗೆ ನಮ್ಮದು ಪ್ರತಿಭಟನೆಯಿದೆ. ಅದು ಆದರೂ ಸಮರ್ಪಕವಾಗಿ ಆಗಬೇಕಲ್ಲ, ಅದರ ಬಗ್ಗೆ ಆಡಳಿತ ಪಕ್ಷದವರು ಚಿಂತನೆ ಮಾಡಬೇಕಲ್ಲ, ಇವತ್ತು ಚುನಾವಣೆಯ ಬಗ್ಗೆ ನಮ್ಮ ಸಭಾನಾಯಕರು ಹೇಳಿದರು. ಗ್ರಾಮಪಂಚಾಯಿತಿ ಚುನಾವಣೆಯನ್ನು ನಡೆಸಬೇಕಾಯಿತು, ನಡೆಸಬೇಕಾದ್ದು ಅನಿವಾರ್ಯ. ಏಕೆಂದರೆ ಕೇಂದ್ರಸರ್ಕಾರ ಇಲ್ಲಿಗೆ ಕೊಡುವಂತಹ ಮೊತ್ತವನ್ನು ಹಿಡಿದಿಟ್ಟಿದ್ದರು. ಇದನ್ನೆಲ್ಲ ಹೇಳಿದರು, ಇದಕ್ಕೆ ನಮ್ಮದೇನೂ ತಕರಾರು ಇಲ್ಲ. ಚುನಾವಣೆಯನ್ನು ನಡೆಸಿದ್ದೀರಿ, ನಾವು ಕೂಡ ಚುನಾವಣೆಯಲ್ಲಿ ಭಾಗಿಯಾದೆವು. ಲಾಟರಿ ಹಾಕಿ ಅಧ್ಯಕ್ಷರು ಉಪಾಧ್ಯಕ್ಷರುಗಳನ್ನು ಆಯ್ಕೆ ಮಾಡಿದರು. ಇದರ ಬಗ್ಗೆ ನಾವೇನೂ ತಕರಾರು ಮಾಡಲಿಲ್ಲ. ಇವತ್ತಿಗೂ ಕೂಡ ತಕರಾರು ಮಾಡುತ್ತಿಲ್ಲ. ಅಂದರೆ ತಕ್ಷಣ ಒಂದು ಬದಲಾವಣೆಯ ಹಂತವನ್ನು ತರುವಂತಹದ್ದು ಅದರ ಬಗ್ಗೆ ಸ್ವಲ್ಪ ಜಿಜ್ಞಾಸೆಯಿದೆ ಅದನ್ನು ಚರ್ಚೆ ಮಾಡುವಂತಹ ಸಂದರ್ಭವಿದೆ. ಅದನ್ನು ಚರ್ಚೆ ಮಾಡೋಣ. ಆದರೆ ಈ ಅರ್ಥದಲ್ಲಿ ನಿಜವಾಗಿ ಆಡಳಿತ ಪಕ್ಷದ ವ್ಯವಹಾರಗಳಲ್ಲಿ ಅವರು ಮಾಡತಕ್ಕ ಕೆಲಸ ಕಾರ್ಯಗಳ ಬಗ್ಗೆ ನಮ್ಮದು ವಿರೋಧವಿದೆ. ಆದ್ದರಿಂದ ನಮ್ಮ ಧರಣಿಯನ್ನು ಮುಂದುವರಿಸುತ್ತೇವೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರಿಗೆ ಅನುಮಾನಗಳು ಇತ್ತು. ಕೇಂದ್ರಸರ್ಕಾರದವರು 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದರ ಬಗ್ಗೆ. ಹತ್ತನೇ ಹಣಕಾಸಿನ ಆಯೋಗ ಪ್ರತಿ ವರ್ಷ 55 ಕೋಟಿ ರೂಪಾಯಿ ಶಿಫಾರಸು ಮಾಡುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಈ ಅನುದಾನವನ್ನು ಅವರು ಶಿಫಾರಸು ಮಾಡುತ್ತಾರೆ. ಚುನಾಯಿತ ಪಂಚಾಯಿತಿಗಳು ರಾಜ್ಯದಲ್ಲಿ ಅಸ್ತಿತ್ವದಲ್ಲಿ ಇಲ್ಲದಿದ್ದುದರಿಂದ ಈ ಹಣವನ್ನು ಚುನಾವಣೆಗಳು ನಡೆದ ನಂತರ ಮಾತ್ರ ಬಿಡುಗಡೆ ಮಾಡುವುದಾಗಿ ಕೇಂದ್ರಸರ್ಕಾರದ ಅರ್ಥ ಸಚಿವಾಲಯದವರೇ ಹೇಳಿ ಇದನ್ನು ತಡೆಹಿಡಿದಿದ್ದರು. ಈಗ ಚುನಾವಣೆಗಳನ್ನು ನಡೆಸಿದ್ದರಿಂದ ಈ ಹಣವನ್ನು ಬಿಡುಗಡೆ ಮಾಡಿದ್ದಾರೆ. ಮತ್ತು ಚುನಾವಣೆಗಳನ್ನು ನಡೆಸಿದ್ದೇವೆಂದು ದೃಢೀಕರಣ ಪತ್ರವನ್ನು ಕಳುಹಿಸಿದ ಮೇಲೆ 21ನೇ ತಾರೀಕು ಪೇಮೆಂಟ್ ಆಫ್ ಗ್ರಾಂಟ್ಸ್ ಪಂಚಾಯತ್ ರಾಜ್ಯ ಇನ್ಸ್ಟಿಟ್ಯೂಷನ್ಸ್‌ಗೆ 110 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ.

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರೇ, ನೀವು ಏಕೆ ಹೀಗೆ ಮಾಡುತ್ತೀರಿ, ಆರನೆಯ ಸಲ ಚುನಾಯಿತರಾಗಿದ್ದೀರಿ. ನಿಮ್ಮ ಬಗ್ಗೆ ನನಗೆ ಆಶ್ಚರ್ಯವಾಗುತ್ತದೆ.

(ಮಾನ್ಯ ಸಿಂಧ್ಯಾರವರು ಸಭಾಧ್ಯಕ್ಷರ ಪೀಠದ ಮುಂದಿನ ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು: ನೀವು ಮಾತನಾಡುವಾಗ ಹೇಳಿ.

+ ಶ್ರೀ ವಿಶ್ವೇಶ್ವರ ಹೆಗಡ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೆ, ಈ ಬಿಲ್ಲನ್ನು ಯಾವ ಕಾರಣಕ್ಕೋಸ್ಕರ ಇಂಟರ್‌ಡ್ಯೂಸ್ ಮಾಡಬಾರದೆನ್ನುವ ನಮ್ಮ ಅಪೇಕ್ಷ ಇತ್ತೆಂದರೆ, ನಾವೆಲ್ಲ ನಮ್ಮ ಸಂವಿಧಾನಕ್ಕೆ ಬದ್ಧವಾಗಿ ನಡೆದುಕೊಳ್ಳುತ್ತಿದ್ದೇವೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯನ್ನು ಮಾನ್ಯ ಮಾಜಿ ಪ್ರಧಾನಿಗಳಾದ ದಿವಂಗತ ರಾಜೀವಗಾಂಧಿಯವರು ತಂದರು. ಅದರ ಪ್ರಕಾರವಾಗಿ ವಿಕೇಂದ್ರೀಕರಣದ ವ್ಯವಸ್ಥೆ ಜಾರಿಗೆ ಬಂತು. ಅದರಲ್ಲಿ ಮೂರು ಪ್ರಮುಖವಾದ ಸಂಗತಿಗಳು ಇದೆ. ಸ್ಟೇಟ್ ಎಲೆಕ್ಷನ್ ಕಮಿಷನ್, ಸ್ಟೇಟ್ ಫೈನಾನ್ಸ್ ಕಮಿಷನ್ ಸ್ಟೇಟ್ ಪ್ಲಾನಿಂಗ್ ಕಮಿಷನ್ ಈ ಮೂರನ್ನು ಆಯಾಯ ರಾಜ್ಯಗಳು ಸ್ಥಾಪಿಸಿಕೊಳ್ಳಬೇಕೆಂದು ಇದೆ. ನಮ್ಮ ಅಪೇಕ್ಷ ಏನು? ಮಾನ್ಯ ಘೋರ್ಪಡೆಯವರಿಗೆ ಹೇಳುವುದು ಏನೆಂದರೆ, ಈ ಮೂರು ಕಮಿಷನ್‌ಗಳನ್ನು ಮಾಡುವುದಕ್ಕೆ ಏನು ಸಂವಿಧಾನ ತಿದ್ದುಪಡಿ ಆಗಿದೆಯೋ ಆ ತಿದ್ದುಪಡಿಯ ಹಿನ್ನೆಲೆಯಲ್ಲಿ ಸ್ಟೇಟ್ ಎಲೆಕ್ಷನ್ ಕಮಿಷನ್‌ಗೆ ಕೊಟ್ಟಿರುವಂತಹ ಅಧಿಕಾರವನ್ನು ಸರ್ಕಾರ ತೆಗೆದುಕೊಳ್ಳುವುದು, ಸಂವಿಧಾನ ತಿದ್ದುಪಡಿಗೆ ವಿರುದ್ಧವಾಗಿ ನೀವು ನಡೆದುಕೊಳ್ಳುತ್ತೀರಿ ಅಂದರೆ, ಮಾನ್ಯ ರಾಜೀವಗಾಂಧಿಯವರ ಅಪೇಕ್ಷೆ ಏನಿತ್ತೊ ಅದಕ್ಕೆ ವಿರುದ್ಧವಾಗಿ ನೀವು ನಡೆದುಕೊಳ್ಳುತ್ತೀರಿ ಎನ್ನುವ ಮಾತನ್ನು ಕನ್ವಿನ್ಸ್ ಮಾಡಬೇಕು ಆ ಮೂಲಕ ಸರ್ಕಾರಕ್ಕೆ ಮನವರಿಕೆಯಾಗಿ ಆ ಬಿಲ್ಲನ್ನು ಮಂಡಿಸದೇ ಇರುವ ಹಾಗೆ ಆಗಬೇಕೆನ್ನುವಂತಹದ್ದು ನಮ್ಮ ಅಪೇಕ್ಷೆಯಿತ್ತು. ಅದಕ್ಕೂ ನಿನ್ನೆ ಸದನದಲ್ಲಿ ನೀವು ನೋಡಿದಿರಿ, ನಮ್ಮ ಮಾತನ್ನು ನೀವು ಒಪ್ಪಿಕೊಂಡರೂ ಅವರು ಒಪ್ಪಿಕೊಳ್ಳಲಿಕ್ಕೆ ತಯಾರಿರಲಿಲ್ಲ. ಹಾಗಾಗಿ ನಮ್ಮ ಧರಣಿಯ ಮಧ್ಯೆ ಅವರು ಬಿಲ್ಲನ್ನು ಮೂವ್ ಮಾಡಿದರು. ಈಗಲಾದರೂ ನಾವೇನು ಹೇಳುವುದೆಂದರೆ, ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿಸಿಕೊಳ್ಳುವುದೆಂದರೆ ಇದರಲ್ಲಿ ಅನೇಕ ಮೂಲಭೂತವಾದ ಸಂಗತಿಗಳು ಇವೆ. ಸಂವಿಧಾನದ ತಿದ್ದುಪಡಿಯ ಸಂಗತಿಯಿದೆ. ನಮ್ಮ ರಾಜ್ಯದಲ್ಲಿ ಈ ವ್ಯವಸ್ಥೆಯನ್ನು ಹೇಗೆ ವಿಕೇಂದ್ರೀಕರಣ ಮಾಡಿ ಅದನ್ನು ಉಪಯೋಗಿಸಿಕೊಂಡು ರಾಜ್ಯದ ಜನತೆಗೆ ಅಧಿಕಾರ ವಿಕೇಂದ್ರೀಕರಣದ ಮೂಲಕ ಅಧಿವೃದ್ಧಿಯ ದಿಕ್ಕಿನಲ್ಲಿ ಮುಂದೆ ಹೋಗಬೇಕೆನ್ನುವ ಚಿಂತನೆಯನ್ನು ಮಾಡಬೇಕಾಗಿದೆ. ಆ ಚಿಂತನೆಯನ್ನು ಏಕಮುಖವಾಗಿ ಏಕಪಕ್ಷವಾಗಿ ತನ್ನ ರಾಜಕೀಯದ ಅನುಕೂಲಕ್ಕೆ ತಕ್ಕಂತೆ ಆಡಳಿತ ಪಕ್ಷ ಮಾಡಬಾರದು. ಅದನ್ನು ನಾವು ಈ ಸದನದ ಎಲ್ಲ ಸದಸ್ಯರು ಕುಳಿತು ಯೋಚನೆ ಮಾಡಿ ಬಿಲ್ಲನ್ನು ಮೂವ್ ಮಾಡುವಾಗಲೂ ಸಹ ಯಾವರೀತಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ನಾವು ಚರ್ಚೆ ಮಾಡಿದರೆ ತಪ್ಪಾಗುವುದಿಲ್ಲ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಈ ಹಿನ್ನೆಲೆಯಲ್ಲಿ ನಾವು ಈ ರೀತಿ ನಮ್ಮ ಧರಣಿಯನ್ನು ಮುಂದುವರೆಸುತ್ತಿದ್ದೇವೆ. ಈ ಸಂಗತಿಯನ್ನು ಸಹ ತಮ್ಮ ಮೂಲಕ ಆಡಳಿತ ಪಕ್ಷಕ್ಕೆ ಮತ್ತು ಸರ್ಕಾರಕ್ಕೆ ತಿಳಿಸುವುದಕ್ಕೆ ಬಯಸುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಒಬ್ಬೊಬ್ಬರೇ ಅವರವರ ಜಾಗಕ್ಕೆ ಹೋಗಿ ಚರ್ಚೆಯನ್ನು ಆರಂಭ ಮಾಡಿದ್ದಾರೆ. ಅದರ ಬದಲು ಎಲ್ಲರೂ ಅಲ್ಲಿ ಹೋಗಿ ಚರ್ಚೆಯನ್ನು ಆರಂಭ ಮಾಡಬಹುದು. ಈಗ ಮೂರು ಜನರ ಸದಸ್ಯರು ಹೋಗಿ ಮಾತನಾಡಿದರು. ಆದ್ದರಿಂದ ಎಲ್ಲರೂ ಒಟ್ಟಿಗೆ ಹೋಗಿ ಚರ್ಚೆಯನ್ನು ಆರಂಭ ಮಾಡಬಹುದು. ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿದರು, ಮಾನ್ಯ ಸಿಂಧ್ಯರವರು ಮಾತನಾಡಿದರು. ವಿರೋಧಿ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್ ಅವರು ಸಹ ಮಾತನಾಡಿದರು. ಆದ್ದರಿಂದ ಚರ್ಚೆ ಆರಂಭವಾಗಿದೆ.

ಅಧ್ಯಕ್ಷರು: ಈಗ ನನಗೆ ಬೇಕಾಗಿರುವುದು ಸಮಸ್ಯೆ ತಿಳಿಯಾಗಬೇಕು, ಅಷ್ಟೆ.

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ): ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಸಂವಿಧಾನಕ್ಕೆ ವಿರೋಧವಾಗಿ ನಡೆದುಕೊಳ್ಳುತ್ತಿದ್ದೇವೆ, ಅದಕ್ಕೋಸ್ಕರ ಪ್ರತಿಧ್ವನಿಯನ್ನು ಎತ್ತಿದ್ದೇವೆ ಎಂಬ ಮಾತು ಬಹಳ ಸತ್ಯಕ್ಕೆ ದೂರವಾದುದು. ಏಕೆಂದರೆ 1993ರಲ್ಲಿ ನಾವು ಕರ್ನಾಟಕ ಸರ್ಕಾರ ಆ್ಯಕ್ಟ್ ಮಾಡಿದಾಗ 73ನೇ ಸಂವಿಧಾನ ತಿದ್ದುಪಡಿ ಆಗತಾನೇ ಆಗಿತ್ತು. ಸಂವಿಧಾನ ತಿದ್ದುಪಡಿ ಪ್ರಕಾರ ಪ್ರತಿಯೊಂದು ರಾಜ್ಯದಲ್ಲಿ ಎಲೆಕ್ಷನ್ ಕಮಿಷನ್ ಇರಬೇಕು ಎಂಬುದು ಇದೆ. ಅದಕ್ಕೋಸ್ಕರ ನಮ್ಮ ಕಾನೂನಿನಲ್ಲಿ ನಾವು ಇಲ್ಲಿ ಮೇ ತಿಂಗಳಿನಲ್ಲಿ ಪಾಸ್ ಮಾಡಿರತಕ್ಕಂಥ ಕಾನೂನಿನಲ್ಲಿ ಎಲೆಕ್ಷನ್ ಕಮಿಷನ್‌ನ್ನು ಸ್ಥಾಪನೆ ಮಾಡುವಂಥ ತಿರ್ಮಾನಕ್ಕೆ ಬಂದು ಈ ಕೆಲಸವನ್ನು ಮಾಡಿದ್ದೇವೆ. ಎಲೆಕ್ಷನ್ ಕಮಿಷನ್ನೇ ಚುನಾವಣೆಗಳನ್ನು ನಡೆಸುವುದು. ಇದರ ಪ್ರಕಾರ ಕರ್ನಾಟಕದಲ್ಲಿ ನಾವು 73ರ ಸಂವಿಧಾನ ತಿದ್ದುಪಡಿ ಪ್ರಕಾರ ಮತ್ತು ನಮ್ಮ ಕಾನೂನು ಪ್ರಕಾರ ಸ್ಥಾಪನೆ ಮೌಡಿರತಕ್ಕಂಥ ಎಲೆಕ್ಷನ್ ಕಮಿಷನರ್ ಅವರು ಚುನಾವಣೆಗಳನ್ನು ಕರ್ನಾಟಕದಲ್ಲಿ ಮಾಡಿದ್ದಾರೆ. ಅನಂತರ ಜನತಾ ಸರ್ಕಾರ 1997ರಲ್ಲಿ ಅವರಿಗೆ ಏನು ಅನಿಸಿತು ಎಂದು ನನಗೆ ಗೊತ್ತಿಲ್ಲ. ಇನ್ನೂ ಒಂದು ಭಾರವನ್ನು ಎಲೆಕ್ಷನ್ ಕಮಿಷನರ್ ಮೇಲೆ ಅನಾವಶ್ಯಕವಾಗಿ ಹಾಕಿದರು ಎಂದು ನನ್ನ ಅಭಿಪ್ರಾಯ. ಅದೇನೆಂದರೆ ರಿಸರ್ವೇಶನ್ಸ್ ಮಾಡುವಂಥ ಜವಾಬ್ದಾರಿ. ಆ ಕೆಲಸವನ್ನು ಸಾಮಾನ್ಯವಾಗಿ ಜಿಲ್ಲೆಯ ಡೆಪ್ಯುಟಿ ಕಮೀಷನರ್ ಅವರೇ ಮಾಡತಕ್ಕದ್ದು. ಏಕೆಂದರೆ ಸ್ಥಳೀಯ ಪರಿಸ್ಥಿತಿ ಅವರಿಗೆ ಗೊತ್ತಿರುತ್ತದೆ. ಮಾನ್ಯ ಸದಸ್ಯರಿಗೂ ಕೂಡ ಅವರನ್ನು ಭೇಟಿ ಮಾಡಿ ಏನಾದರೂ ಟೋಪದೋಷಗಳು ಇದ್ದರೆ ಹೇಳಿಕೊಳ್ಳುವುದಕ್ಕೆ ಇದರಲ್ಲಿ ಅವಕಾಶ ಇರುತ್ತದೆ. ಅದರ ಪ್ರಕಾರ ಅವರು ಮಾಡುತ್ತಾ ಹೋಗಿ ಚುನಾವಣೆಗಳನ್ನು' ಮಾಡಿದ್ದೇವೆ. ಅದೇನೂ ಸಂವಿಧಾನಕ್ಕೆ ವಿರುದ್ಧವಾದ ಹಾಗೆ ನಾವು ಚುನಾವಣೆಯನ್ನು ಮಾಡಿಲ್ಲ. 1997ರಲ್ಲಿ ಅವರೇನು ತಿದ್ದುಪಡಿಯನ್ನು ಮಾಡಿದರು ಈ ರಿಸರ್ವೇಶನ್ಸ್ ಬಗ್ಗೆ ಎಲೆಕ್ಷನ್ ಕಮಿಷನ್‌ಗೆ ಕೂಟ್ಟಿರತಕ್ಕಂಥ ಒಂದು ಮಾತು ಏನಿದೆ, ಅದನ್ನು ಮಾತ್ರ ನಾವು ಪಾಪಸ್ಸು ತಗೆದುಕೊಳ್ಳುತ್ತಿದ್ದೇವೆ. ಅಂದರೆ 1993ರ ಆ್ಯಕ್ಟ್ ಪ್ರಕಾರ ಯಾವುದು ನೂರಕ್ಕೆ ನೂರು

73ರ ತಿದ್ದುಪಡಿ ಪ್ರಕಾರ ಇದೆ, ಆ ಆಕ್ಟ್‌ಗೆ ನಾವು ವಾಪಸ್ಸು ಹೋಗುತ್ತಿದ್ದೇವೆ. ಇದರಲ್ಲಿ ದೋಷಗಳು ಇದ್ದರೆ ಮಾನ್ಯ ಸದಸ್ಯರುಗಳು ಕಟುವಾಗಿ ಟೀಕೆ ಮಾಡಲಿ. ಇದಕ್ಕೆ ನನಗೆ ಮತ್ತು ನಮಗ್ಯಾರಿಗೂ ಆಕ್ಷೇಪಣೆ ಇಲ್ಲ. ಟೀಕೆ ಮಾಡಲಿಕ್ಕೇ ಈ ಸದನ ಇರುವುದು. ಬಿಲ್ ಕನ್ಸಿಡರೇಷನ್‌ಗೆ ಬಂದಾಗ ಟೀಕೆ ಮಾಡುವುದಕ್ಕೆ ಪ್ರತಿಯೊಬ್ಬರಿಗೂ ಅವಕಾಶ ಇದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಎಷ್ಟು ಹೊತ್ತು ಆದರೂ ಅವರು ಟೀಕೆ ಮಾಡಲಿ. ಆದರೆ ಚರ್ಚೆಯನ್ನೇ ಮಾಡುವುದಿಲ್ಲ ಎಂದರೆ ಅದು ಪ್ರಜಾಪ್ರಭುತ್ವದಲ್ಲಿ ನಾವು ಭಾಗಿಯಾಗುವುದಿಲ್ಲ ಎಂದು ಹೇಳಿದ ಹಾಗೆ ಆಗುತ್ತದೆ. ಆ ಮಟ್ಟಕ್ಕೆ ಹೋದರೆ ಅವರಿಗೂ ಫಾಯದೆ ಇಲ್ಲ, ನಮಗೂ ಸಹ ಫಾಯದೆ ಇಲ್ಲ. ಈ ಸದನಕ್ಕೆ ಇದರಿಂದ ಬಹಳ ಅಪಾಯ ಉಂಟಾಗುತ್ತದೆ. ಆದಕಾರಣ ಅನುಭವಸ್ಥರು ಮತ್ತು ಸೀನಿಯರ್ ಜನ ಅಲ್ಲಿ ಇರುವುದರಿಂದ ಆ ಮಟ್ಟಕ್ಕೆ ಹೋಗಬಾರದೆಂದು ನಾನು ಕೂಡ ಅವರಲ್ಲಿ ವಿನಂತಿಸುತ್ತಿದ್ದೇನೆ.

ಅಧ್ಯಕ್ಷರು: ನಿಮ್ಮ ಸಲಹೆಗಳನ್ನು ನೀವು ಮಾತನಾಡುವಾಗ ಹೇಳಬಹುದಲ್ಲ? ಮಾನ್ಯ ಸಿಂಧ್ಯಾರವರೇ, ನೀವು ಏನು ಹೇಳಬೇಕೆಂದು ಇದ್ದೀರಿ ಅದನ್ನು ಅಲ್ಲಿ ಹೇಳಿ. ಅದು ಇಲ್ಲದೆ ಸುಮ್ಮನೆ ನಿಂತರೆ ಹೇಗೆ? ಅದಕ್ಕಿಂತ ಮೊದಲು ನಮ್ಮ ಸಭೆಯ ಕಾರ್ಯಕಲಾಪಗಳನ್ನು ಮುಂದುವರೆಸುವ ಮೊದಲು ನನ್ನ ಕರ್ತವ್ಯ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು. ಅದರಂತೆ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಹಿಂದೆ ಅನೇಕ ಸಲ, ಸುಮಾರು ಆರೇಳು ಸಲ ಇದೇ ರೀತಿ ಬಿಲ್‌ಗಳು ಪಾಸ್ ಆಗಿವೆ. ಇದೇ ರೀತಿ ಇರುವಾಗ ಡಿಮ್ಯಾಂಡ್ಸ್ ಎಲ್ಲ ಪಾಸ್ ಆಗಿವೆ. ಅದನ್ನು ಓದಿ ಹೇಳಬೇಕು ಎಂದರೆ ಓದಿ ಹೇಳೋಣ. ನಮ್ಮದೇನೂ ಅಭ್ಯಂತರ ಇಲ್ಲ. ಆದರೆ ಈ ಲೆವೆಲ್‌ಗೆ ಏಕೆ ಹೋಗಬೇಕು? ಆಲೋಚನೆ ಮಾಡಿ ನೋಡಿ.

(ಗೊಂದಲ. ಸಭಾಧ್ಯಕ್ಷರ ಪೀಠದ ಮುಂಭಾಗದ ಆವರಣದಲ್ಲಿ ನಿಂತಿದ್ದ ಸದಸ್ಯರುಗಳಲ್ಲಿ ಅನೇಕರು ಮಾತನಾಡಲು ಪ್ರಾರಂಭಿಸಿದರು.)

ಅಧ್ಯಕ್ಷರು: ಸುಬ್ಬಾರೆಡ್ಡಿಯವರೇ, ದಯವಿಟ್ಟು ನಿಮ್ಮ ಜಾಗಕ್ಕೆ ಹೋಗಿ ಮಾತನಾಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಶೆಟ್ಟರ್‌ರವರೇ, ಮಾನ್ಯ ಸಿಂಧ್ಯಾರವರೇ, ನೀವು ಮತ್ತು ಅವರು ಮಾತನಾಡಿ ಒಂದು ತೀರ್ಮಾನಕ್ಕೆ ಬನ್ನಿ. ಹೀಗೆ ಪಟ್ಟು ಹಿಡಿದರೆ ಹೇಗೆ? ಒಬ್ಬೊಬ್ಬರಿಗೆ ಕೋಆರ್ಡಿನೇಶನ್ ಇರಬೇಕು. There should be a mutual understanding between the Ruling and Opposition parties. ಅವರು ನಮ್ಮನ್ನು ಬಿಟ್ಟು ಇರುವುದಕ್ಕೆ ಆಗುವುದಿಲ್ಲ, ನೀವು ಅವರನ್ನು ಬಿಡುವುದಕ್ಕೆ ಆಗುವುದಿಲ್ಲ. ಎರಡೂ ಸರಿಯಾಗಿದ್ದರೆ ತಾನೇ ನಾನು ನಿಯಮಾವಳಿ ಪ್ರಕಾರ ಇಲ್ಲಿ ಕೆಲಸ ಮಾಡಬಹುದು.

+ ಶ್ರೀ ವೈ.ಕೆ.ರಾಮಯ್ಯ (ಹುಲಿಯೂರುದುರ್ಗ): ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ನನ್ನದೂ ಒಂದು ಪ್ರಾರ್ಥನೆ. ಆಡಳಿತ ಪಕ್ಷದ ಮಾನ್ಯ ಸಚಿವರು ಸ್ಥಳೀಯ ಸಂಸ್ಥೆಗಳ ಕಾನೂನಿಗೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಆ ತಿದ್ದುಪಡಿಯನ್ನು ಓದಿದರೆ, ಸೂಕ್ಷ್ಮವಾಗಿ ಆಲೋಚನೆ ಮಾಡಿದರೆ ಆ ತಿದ್ದುಪಡಿಯಲ್ಲಿ ಪ್ರಮುಖವಾಗಿರುವುದು ಒಂದು ವಿಷಯದ ಬಗ್ಗೆ. ಮುಂದೆ ಬರುವಂಥ ಚುನಾವಣೆಗಳಲ್ಲಿ ಮೀಸಲಾತಿಯನ್ನು ಯಾರು ಮಾಡಬೇಕು? ಎನ್ನುವ ವಿಷಯದಲ್ಲಿ ಈ ತಿದ್ದುಪಡಿ ಇದೆ. ಇಲ್ಲಿ ಎರಡು ಸೂಕ್ಷ್ಮವಾದ ವಿಷಯಗಳು ಇವೆ. ಈ ಸಂವಿಧಾನದ ಬದಲಾವಣೆ ಆಗುವುದಕ್ಕೆ ಮೊದಲು ಚುನಾವಣೆ ನಡೆಸುವ ಕೆಲಸ, ಮೀಸಲಾತಿಯನ್ನು ನಿಗದಿ ಮಾಡುವ ಕೆಲಸ ಎರಡನ್ನೂ ಸರ್ಕಾರವೇ ಮಾಡುತ್ತಿತ್ತು. ಸಂವಿಧಾನ ಬದಲಾವಣೆ ಆದಮೇಲೆ.... ಮಾನ್ಯ ಸಿಂಧ್ಯಾರವರು ಗೆದ್ದಿರುವುದು ಆರು ಸಲ ಅಲ್ಲ, ಐದು ಸಲ. ಅವರು ಐದು ಸಲ ಗೆದ್ದರೇನು, ಆರು ಸಲ ಗೆದ್ದರೇನು, ನಾವು ನಾವೇ ತಾನೆ. ಸಂವಿಧಾನದ ಬದಲಾವಣೆ ಆದಮೇಲೆ ಮೀಸಲಾತಿಯನ್ನು ಮಾಡುವಂಥ ಕೆಲಸ ಸರ್ಕಾರದ ಪ್ರಿರಾಗೇಟಿವ್ ಅದು. ಮಧ್ಯಪ್ರದೇಶದಲ್ಲಿ, ಮಹಾರಾಷ್ಟ್ರದಲ್ಲಿ ಒಂದು ತರಹ ಮೀಸಲಾತಿ ಇದೆ. ತಮಿಳುನಾಡಿನಲ್ಲಿ ಮೊದಲಿನಿಂದಲೂ ಇದೆ. ಉತ್ತರ ಪ್ರದೇಶದಲ್ಲಿ ಇಲ್ಲವೇ ಇಲ್ಲ. ಯಾರ್ಯಾರಿಗೆ ಸಾಮಾಜಿಕ ನ್ಯಾಯವನ್ನು ಕೊಡುವಂಥ ದೃಷ್ಟಿಯಿಂದ ಮೀಸಲಾತಿ ಮಾಡಬೇಕು ಎನ್ನುವುದು ಚುನಾವಣಾ ಆಯೋಗದ ಕೆಲಸ ಅಲ್ಲ. ಚುನಾವಣಾ ಆಯೋಗದ ಪ್ರಿರಾಗೇಟಿವ್, ಚುನಾವಣೆಗಳನ್ನೂ ನಡೆಸುವುದು ಅವರ ಕರ್ತವ್ಯ. The duties and functions of the Election Commission are to conduct elections, not to fix this reservation.

(ಈ ಸಂದರ್ಭದಲ್ಲಿ ಧರಣಿ ಕುಳಿತಿದ್ದ ಶ್ರೀ ಬಚ್ಚೇಗೌಡರು ಮಾತನಾಡಿದರು)

ಶ್ರೀ ವೈ.ಕೆ.ರಾಮಯ್ಯ: ನಾನು ಹೇಳುವುದನ್ನು ಸ್ವಲ್ಪ ಕೇಳಿ. ಬೇರೆ ಯಾರು ಏನು ಹೇಳಿದ್ದಾರೆ ಅದು ನನಗೆ ಬೇಡ. ಆದ್ದರಿಂದ ಅಧ್ಯಕ್ಷರೇ, ನಾನು ಹೇಳಬೇಕಾದುದು ಇಷ್ಟೆ. ಸಂವಿಧಾನದ ಬದಲಾವಣೆ ಆದ ಮೇಲೆ ಮೀಸಲಾತಿಯನ್ನು ನಿಗದಿ ಮಾಡುವಂಥ ಕರ್ತವ್ಯ, ಕೆಲಸ ಮತ್ತು ಜವಾಬ್ದಾರಿ ಸರ್ಕಾರಕ್ಕೆ ಸೇರಿದ್ದೇ ಹೊರತು ಅದು ಚುನಾವಣಾ ಆಯೋಗದ ಕೆಲಸ ಅಲ್ಲ. ಚುನಾವಣಾ ಆಯೋಗದ ಕೆಲಸ ನ್ಯಾಯಯುತವಾದಂಥ ಚುನಾವಣೆಯನ್ನು ನಡೆಸಬೇಕು ಎಂಬುದು ನಮಗೆ ಗೊತ್ತಿದೆ. ನಮ್ಮ ಕಾಲದಲ್ಲಿ ಸರ್ಕಾರವೇ ಚುನಾವಣೆಯನ್ನು ನಡೆಸುತ್ತಿತ್ತು. ಚುನಾವಣೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು ಎನ್ನುವ ದೃಷ್ಟಿಯಿಂದ ಚುನಾವಣೆಗೆ ಪ್ರತ್ಯೇಕವಾಗಿ ಆಯೋಗ ಇರಬೇಕು ಎನ್ನುವ ದೃಷ್ಟಿಯಿಂದ ತಿದ್ದುಪಡಿಯನ್ನು ತಂದರು. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಈಗ ಚುನಾವಣಾ ಆಯೋಗ ಚುನಾವಣೆಯನ್ನು ಮಾಡುತ್ತದೆ. ಇದರ ಬಗ್ಗೆ ನಾವು ಹಸ್ತಕ್ಷೇಪ ಮಾಡುವುದಿಲ್ಲ. ಸರ್ಕಾರ ಅದಕ್ಕೆ

ತಿದ್ದುಪಡಿಯನ್ನು ತರುವುದಿಲ್ಲ. ಆದರೆ ಮೀಸಲಾತಿಯನ್ನು ನಿಗದಿ ಮಾಡುವಂಥ ಕೆಲಸ, ಕರ್ತವ್ಯ ಅದು ಸಂಪೂರ್ಣವಾಗಿ ಚುನಾವಣಾ ಆಯೋಗದ ಕೆಲಸ ಅಲ್ಲ. ಅದು ಅವರ ಸರ್ಕಾರ ಇರಬಹುದು, ನಮ್ಮ ಸರ್ಕಾರ ಇರುವಾಗ ಇರಬಹುದು. ಅದು ಚುನಾವಣಾ ಆಯೋಗದ ಕೆಲಸ ಅಲ್ಲವೇ ಅಲ್ಲ. ಅದು ಸರ್ಕಾರದ ಕೆಲಸ. ಆದ್ದರಿಂದ ವಿರೋಧ ಪಕ್ಷದಲ್ಲಿ ಇರುವಂಥ ಅನೇಕ ಜನ ಸ್ನೇಹಿತರಿಗೆ ಸಂಪೂರ್ಣವಾಗಿ ಗೊತ್ತಿದೆ. ಮೀಸಲಾತಿಯನ್ನು ನಿಗದಿ ಮಾಡುವಂಥ ಕರ್ತವ್ಯ ಸರ್ಕಾರದ್ದು ಎಂಬ ಅರಿವು ಅವರಿಗೆ ಇರುವುದರಿಂದ ದಯವಿಟ್ಟು ಅದನ್ನು ಅರ್ಥಮಾಡಿಕೊಂಡು ಅವಕಾಶ ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: Please hear me. ಅನೇಕ ರೂಲಿಂಗ್ ಪ್ರಕಾರ ನನಗೆ ಇಲ್ಲಿ ಸಭೆಯ ನಡವಳಿಕೆಗಳನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಅಧಿಕಾರ ಇದ್ದರೂ ಸಹಿತ ಇನ್ನೊಂದು ಕೊನೆಯ ಪ್ರಯತ್ನ ಪಡೋಣ. ಈಗ ಸಭೆಯನ್ನು ಅಡ್ಜರ್ನ್ ಮಾಡಿ ಹನ್ನೆರಡು ಗಂಟೆ ಹದಿನೈದು ನಿಮಿಷಕ್ಕೆ ಪುನಃ ಸೇರೋಣ. ಅಷ್ಟರೊಳಗೆ ವಿರೋಧ ಪಕ್ಷದ ನಾಯಕರುಗಳು ದಯವಿಟ್ಟು ನನ್ನ ಕಚೇರಿಗೆ ಬರಬೇಕು.

(12.00 ಗಂಟೆಗೆ ಸಭೆ ಮುಕ್ತಾಯಗೊಂಡು ಪುನಃ 12 ಗಂಟೆ ಹದಿನೈದು ನಿಮಿಷಕ್ಕೆ ಸೇರಲು ನಿರ್ಧರಿಸಲಾಯಿತು.)

(ಸದನವು ಮಧ್ಯಾಹ್ನ ಒಂದು ಗಂಟೆ ನಲವತ್ತು ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು ವಿರೋಧ ಪಕ್ಷಗಳು ತಮ್ಮ ಧರಣಿಯನ್ನು ಮುಂದುವರಿಸಿತ್ತು)

ಅಧ್ಯಕ್ಷರು: ಮಾತುಕತೆ ಮುಂದುವರಿಯುತ್ತಿದೆ. ಬಹುಶಃ ಮಾತುಕತೆ ಕೊನೆಯ ಹಂತದಲ್ಲಿದೆ. ಈಗ ಸದನವನ್ನು ಮುಂದೂಡಿ ಮತ್ತೆ ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 1 ಗಂಟೆ 42 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3.50ಕ್ಕೆ ಸಮಾವೇಶಗೊಂಡಿತು)

(ಸದನವು ಆರಂಭವಾದಾಗ ವಿರೋಧ ಪಕ್ಷಗಳಾದ ಭಾರತೀಯ ಜನತಾ ಪಕ್ಷದ ಶಾಸಕರು, ಸಂಯುಕ್ತ ಜನತಾದಳದ ಶಾಸಕರು ಮತ್ತು ಜಾತ್ಯಾತೀತ ಜನತಾದಳದ ಶಾಸಕರು ಸದನದ ಬಾವಿಯಲ್ಲಿ ಧರಣಿ ನಡೆಸಿದ್ದರು)

ಅಧ್ಯಕ್ಷರು: ಈಗ ಈ ದಿನದ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡೋಣ. ಮೊದಲು ಪ್ರಶ್ನೋತ್ತರ ವೇಳೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಶಾಸಕರುಗಳನ್ನು ಸದನದ ಪೋಡಿಯಂನಲ್ಲಿ ನಿಲ್ಲಿಸಿಕೊಂಡು ಸಭೆಯನ್ನು ನಡೆಸುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಈ ಬಿಲ್ಲನ್ನು ಇಂಟ್ರೊಡ್ಯೂಸ್ ಮಾಡಿದ್ದ ಕಾರಣ ಅದರ ಬಗ್ಗೆ ಅವರು ಧರಣಿ ಮಾಡುತ್ತಿದ್ದಾರೆ. ಈ ಬಿಲ್ ಬಗ್ಗೆ ಪಕ್ಷೇತರ ಶಾಸಕರುಗಳಾದ ನಮ್ಮದೂ ವಿರೋಧವಿದೆ. ಆದರೆ ನಾವು ಧರಣಿಯನ್ನು ಮಾತ್ರ ಮಾಡುತ್ತಿಲ್ಲ. ಆದ್ದರಿಂದ, ಅವರನ್ನು ಬಾವಿಯಲ್ಲಿ ನಿಲ್ಲಿಸಿಕೊಂಡು ಪ್ರಶ್ನೋತ್ತರ ವೇಳೆಯನ್ನು ಮಾಡುವಂಥಾದ್ದು ಮತ್ತು ಸಭೆಯ ಕಾರ್ಯಕಲಾಪಗಳನ್ನು ಮಾಡುವಂಥಾದ್ದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಆದ್ದರಿಂದ ಇದರ ಬಗ್ಗೆ ಒಂದು ಇತ್ಯರ್ಥವನ್ನು ಮಾಡಿ ನಂತರ ಸಭೆಯ ಕಾರ್ಯಕಲಾಪಗಳನ್ನು ಮಾಡುವಂಥಾದ್ದು ಸೂಕ್ತ ಎಂದು ಕಾಣುತ್ತದೆ.

ಅಧ್ಯಕ್ಷರು: ತಮಗೂ ಗೊತ್ತಿರಬಹುದು. ಇಂದು 12 ಗಂಟೆಯಿಂದ ಮೂರೂವರೆ ಗಂಟೆಯವರೆಗೂ ನಾವು ಎಲ್ಲಾ ರೀತಿಯಲ್ಲೂ ಸಂಧಾನ ಎಲ್ಲವನ್ನೂ ಮಾಡಿದ್ದೇವೆ. ಆದರೂ ಅದು ಇತ್ಯರ್ಥವಾಗಿಲ್ಲ. ಇನ್ನೂ ಏನು ಮಾಡಬೇಕೆಂದು ಹೇಳಿ. ನಮ್ಮ ಕೆಲಸವನ್ನು ನಾವು ಪ್ರಾರಂಭ ಮಾಡೋಣ.

ಶ್ರೀ ಚೌಡರೆಡ್ಡಿ: ಅಧ್ಯಕ್ಷರೇ, ಸ್ವಲ್ಪ ಆಲೋಚನೆ ಮಾಡಿ. ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಮುಖ್ಯವಾಗಿ ಇನ್ನೊಂದು ಸಣ್ಣ ಟೆಕ್ನಿಕಲ್ ವಿಷಯವೆಂದರೆ, ನಾನು ಹಿಂದೆ ಮೀನುಗಾರಿಕಾ ಸಚಿವನಾಗಿದ್ದಾಗ, ನಾವು ಒಂದು ಬಿಲ್ಲನ್ನು ಇಂಟ್ರೊಡ್ಯೂಸ್ ಮಾಡಿದಾಗ ಮಾನ್ಯ ಖಿರ್ಗೆಯವರು ಒಂದು ತಪ್ಪನ್ನು ಕಂಡುಹಿಡಿದಿದ್ದರು. ಅದೇ ತಪ್ಪನ್ನು ಅವರು ಇದರಲ್ಲಿಯೂ ಸಹ ತಂದಿದ್ದಾರೆ.

ಅಧ್ಯಕ್ಷರು: ಬಿಲ್ಲಿನ ಪ್ರಶ್ನೆ ಇನ್ನೂ ಬಂದಿಲ್ಲ. ಈಗ ನಾವು ಮೊದಲು ತೆಗೆದುಕೊಂಡಿರುವುದು ಪ್ರಶ್ನೋತ್ತರ ವೇಳೆ. ಬಿಲ್ ಬಂದಾಗ ನೀವು ಮಾತನಾಡಿ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಹಾಗಾದರೆ ಇದರ ಬಗ್ಗೆ ಇತ್ಯರ್ಥವಾಗಲಿ. ಬಿಲ್ಲಿನ ಬಗ್ಗೆ ಯಾವುದೇ ತೀರ್ಮಾನವಾಗದೇ ಪ್ರಶ್ನೋತ್ತರ ವೇಳೆಯನ್ನು ಮಾಡುವಂಥಾದ್ದು ಸರಿಯಲ್ಲ.

ಅಧ್ಯಕ್ಷರು: ಇತ್ಯರ್ಥ ಆಗಿದ್ದರೆ ಅವರು ಅಲ್ಲಿಗೆ ಹೋಗುವ ಪ್ರಶ್ನೆಯೇ ಬರುತ್ತಿರಲಿಲ್ಲ. ನಮ್ಮ ಕೆಲಸ ನಿಲ್ಲಿಸಲು ಆಗುವುದಿಲ್ಲ. ಈ ದಿನ ನಮ್ಮ ಕಾರ್ಯಕ್ರಮದ ಅಡಿಯಲ್ಲಿ ಏನು ಮೆನ್‌ಷನ್ ಮಾಡಿದ್ದೇವೆ, ಅದನ್ನು ತೆಗೆದುಕೊಳ್ಳೋಣ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಬಿಲ್ಲಿನ ಬಗ್ಗೆ ಇತ್ಯರ್ಥವಾಗದೇ ಪ್ರಶ್ನೋತ್ತರ

ವೇಳೆಯನ್ನು ಮಾಡುವಂಥಾದ್ದು ಸರಿಯಲ್ಲ. ಯಾವುದಾದರೊಂದು ಇತ್ಯರ್ಥವಾಗಬೇಕು. ಏಕೆಂದರೆ ಅವರನ್ನು ಅಲ್ಲಿ ನಿಲ್ಲಿಸಿಕೊಂಡು, ಹೆಚ್ಚಿನ ಸದಸ್ಯರು ಅಲ್ಲಿರುವಾಗ ಕಾರ್ಯಕಲಾಪ ನಡೆಸುವುದು ಸರಿಯಲ್ಲ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಆದಮೇಲೆ ಬಿಲ್ ಬರುತ್ತದೆ. ಮೊದಲು ಪ್ರಶ್ನೋತ್ತರ ವೇಳೆ ತೆಗೆದುಕೊಂಡಿದ್ದೇವೆ. ನೀವು ಬಿಲ್ ಬಗ್ಗೆ ಮಾತನಾಡಿದರೆ ಹೇಗೆ? ನಿನ್ನೆ ಅವರು ಬಿಲ್ಲನ್ನು ಮೂವ್ ಮಾಡಿದ್ದಾರೆ. ಕನ್‌ಸಿಡರೇಷನ್‌ಗೆ ತೆಗೆದುಕೊಂಡಾಗ ಮಾತನಾಡಿ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಹಾಗಾದರೆ ಬೆಳಿಗ್ಗೆಯೇ ಪ್ರಶ್ನೋತ್ತರ ವೇಳೆಯನ್ನು ಮುಗಿಸಿಬಿಟ್ಟು ಆಮೇಲೆ ಇದರ ಬಗ್ಗೆ ಚರ್ಚೆ ಮಾಡಬಹುದಿತ್ತು.

ಅಧ್ಯಕ್ಷರು: ಕೊನೆಯದಾಗಿ ಒಂದು ಪ್ರಯತ್ನ ಮಾಡೋಣವೆಂದು ನಾನು ವಿರೋಧ ಪಕ್ಷದ ನಾಯಕರನ್ನು ಕರೆಸಿ ಮಾತನಾಡಿದೆ ಇತ್ಯರ್ಥವಾಗಲಿಲ್ಲ. ನಾವು ಇನ್ನೂ ಏನು ಮಾಡುವುದಕ್ಕಾಗುತ್ತದೆ ಹೇಳಿ.

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು: ವೆಲ್‌ನಲ್ಲಿ ಮಾತನಾಡಬಾರದು. ತಮ್ಮ ತಮ್ಮ ಜಾಗಗಳಿಗೆ ಹೋಗಿ ಮಾತನಾಡಿ. ಇಲ್ಲದಿದ್ದರೆ ಅದು ಕಡತಕ್ಕೆ ಹೋಗುವುದಿಲ್ಲ. ಈಗ ಪ್ರಶ್ನೋತ್ತರ, ಗುರುಸ್ವಾಮಿಯವರೇ ತಾವು ಪ್ರಶ್ನೆ ಕೇಳಿ.

2. ಪ್ರಶ್ನೋತ್ತರ ವೇಳೆ.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೇ, ಉನ್ನತ ಶಿಕ್ಷಣ ಸಚಿವರನ್ನು ಪ್ರಶ್ನೆ ಸಂಖ್ಯೆ 52ನ್ನು ಕೇಳುತ್ತಿದ್ದೇನೆ.

ಉನ್ನತ ವ್ಯಾಸಂಗಕ್ಕಾಗಿ ನಿಯೋಜಿಸಿರುವ ಉಪನ್ಯಾಸಕರುಗಳು

31(52)

ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಉನ್ನತ ವ್ಯಾಸಂಗಕ್ಕಾಗಿ (ಡಿಪ್ಲೊಮೋದಿಂದ ಬಿ.ಇ.ಗೆ ಬಿ.ಇ.ಯಿಂದ ಎಂ.ಇ.ಗೆ ಎಂ.ಇ.ಯಿಂದ ಪಿ.ಹೆಚ್.ಡಿ.ಗೆ) ನಿಯೋಜಿಸಿದ ಉಪನ್ಯಾಸಕರುಗಳು ಯಾರು ಯಾರು (ನಿಯೋಜಿಸಿದ ದಿನಾಂಕವಾರು ವಿವರಗಳನ್ನು ಒದಗಿಸುವುದು)?

ಆ) ಆ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಯಾರು ಯಾರು?

ಇ) ನಿಯೋಜಿಸಿದವರ ಪೈಕಿ ಉತ್ತೀರ್ಣರಾಗಿ ಪದವಿ ಪಡೆದವರು ಯಾರು ಯಾರು?

ಈ) ಈ ಮೇಲ್ಕಂಡವರ ಉನ್ನತ ವ್ಯಾಸಂಗಕ್ಕಾಗಿ ವ್ಯಯ ಮಾಡಲಾಗಿರುವ ಹಣವೆಷ್ಟು?

ಉ) ಪದವಿಯನ್ನು ಗಳಿಸದೆ ಹಣವನ್ನು ವ್ಯಯ ಮಾಡಿರುವುದರಿಂದ ವಾಪಸ್ಸು ಪಡೆಯಲು ಕೈಗೊಂಡ ಕ್ರಮಗಳೇನು?

ಡಾ: ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) ತಾಂತ್ರಿಕ ಶಿಕ್ಷಣ ಇಲಾಖೆಯ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಡಿಪ್ಲೊಮೋ ವಿದ್ಯಾರ್ಹತೆ ಹೊಂದಿರುವ ಉಪನ್ಯಾಸಕರುಗಳಿಗೆ ಬಿ.ಇ. ವ್ಯಾಸಂಗಕ್ಕಾಗಿ ನಿಯೋಜಿಸಲಾಗಿತ್ತು.

1994-95ನೇ ಶೈಕ್ಷಣಿಕ ವರ್ಷ

ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು	ಪದನಾಮ ಸಂಸ್ಥೆಯ ಹೆಸರು	ನಿಯೋಜಿಸಿದ ದಿನಾಂಕ
ಶ್ರೀ : ಶ್ರೀಮತಿ			
1.	ಎ.ವಿ.ಶ್ರೀರಾಮರೆಡ್ಡಿ	ಉಪನ್ಯಾಸಕರು ಪ್ರಿಂಟಿಂಗ್ ವಿಭಾಗ ಐ.ಪಿ.ಟಿ. ಬೆಂಗಳೂರು	15-10-94

2.	ಶ್ರೀ ಮೊಹಮ್ಮದ್ ಸಮೀಹುಲ್ಲಾ	-ಅದೇ-	15-10-94
3.	ಮಲ್ಲಿಕಾರ್ಜುನ ಎಸ್. ದಬಾಡೆ	ಉಪನ್ಯಾಸಕರು ಟೆಕ್ಸ್‌ಟೈಲ್ ವಿಭಾಗ ಐ.ಟಿ.ಟಿ ಬೆಂಗಳೂರು	15-10-94
4.	ಸುರೇಶ್ ಗಣೇಶ್	ಉಪನ್ಯಾಸಕರು ಗಣಿ ವಿಭಾಗ ಕೆ.ಜಿ.ಎಫ್	08-11-94
5.	ಜಿ.ರಾಮಕೃಷ್ಣ ಪ್ರಸಾದ್	ಉಪನ್ಯಾಸಕರು ಆಟೋ ವಿಭಾಗ ಸ.ಪಾಲಿಟೆಕ್ನಿಕ್, ಬಳ್ಳಾರಿ.	19-12-94

1995-96ನೇ ಸಾಲಿನ ಶೈಕ್ಷಣಿಕ ವರ್ಷ

1	2	3	4
6.	ಗೋವಿಂದರಾಜು	ಕೆಮಿಕಲ್ ವಿಭಾಗಾಧಿಕಾರಿ ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್, ಬೆಂಗಳೂರು.	02-11-95
7.	ಸಿ.ಪಿ.ಗಣಪತಿ	ಉಪನ್ಯಾಸಕರು ಮೆಕ್ಯಾನಿಕಲ್ ವಿಭಾಗ, ಸರ್ಕಾರಿ ಪಾಲಿಟೆಕ್ನಿಕ್ ಕುಶಾಲನಗರ.	02-11-95

8.	ಅಶ್ವತ್ಥಯ್ಯ	ಉಪನ್ಯಾಸಕರು ಸಿರಾಮಿಕ ವಿಭಾಗ ಎಸ್. ಜೆ. (ಸರ್ಕಾರಿ) ಪಾಲಿಟೆಕ್ನಿಕ್ ಬೆಂಗಳೂರು.	02-11-95

1996-97ನೇ ಶೈಕ್ಷಣಿಕ ವರ್ಷ

9.	ಕೆ.ಕೃಷ್ಣಮೂರ್ತಿ	ಆಟೋ ವಿಭಾಗಾಧಿಕಾರಿ ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು	17-12-96
10.	ಬಸವರಾಜು	ಉಪನ್ಯಾಸಕರು ಮೆಕ್ಯಾನಿಕಲ್ ವಿಭಾಗ ಸರ್ಕಾರಿ ಪಾಲಿಟೆಕ್ನಿಕ್ ಬೀದರ್.	17-12-96

ಬಿ.ಇ.ಯಿಂದ ಎಂ.ಇ.ಗೆ ಹಾಗೂ ಎಂ.ಇ.ಯಿಂದ ಪಿ.ಹೆಚ್.ಡಿ.ಗೆ ಯಾರನ್ನು ನಿಯೋಜಿಸಿರುವುದಿಲ್ಲ.

ಆ) 'ಆ'ನಲ್ಲಿ ನಮೂದಿಸಿರುವ ಅಭ್ಯರ್ಥಿಯ ಕ್ರಮ ಸಂಖ್ಯೆ : 4, 6, ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ಆಯ್ಕೆಗೆ ಲಭ್ಯವಿರಲಿಲ್ಲ.

ಇ) ನಿಯೋಜಿಸಿದವರ ಪೈಕಿ ಎ.ವಿ.ಶ್ರೀರಾಮರೆಡ್ಡಿ, ಉಪನ್ಯಾಸಕರು, ಮುದ್ರಣ ವಿಭಾಗ, ಎ.ಪಿ.ಟಿ. ಬೆಂಗಳೂರು, ಇವರು, ನವೆಂಬರ್ 99ರಂದು ಬಿ.ಇ. ಪದವಿಯನ್ನು ಪಡೆದುಕೊಂಡಿರುತ್ತಾರೆ.

ಈ) ಉನ್ನತ ವ್ಯಾಸಂಗಕ್ಕಾಗಿ ನಿಯೋಜಿಸಿರುವ ಅಭ್ಯರ್ಥಿಯು ಕಳಕಂಡ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

1. ನಿಯೋಜಿಸಿದ ಅವಧಿಯಲ್ಲಿ ಪಡೆದಿರುವ ವೇತನ ಮತ್ತು ಇತರ ಭತ್ಯಗಳು.

2. ವ್ಯಾಸಂಗಕ್ಕಾಗಿ ಕಾಲೇಜು : ವಿಶ್ವವಿದ್ಯಾಲಯ ನಿಗಧಿಪಡಿಸಿರುವ ಶುಲ್ಕಗಳು (ಬೋಧನ ಶುಲ್ಕ ಮತ್ತು ಪರೀಕ್ಷಾ ಶುಲ್ಕ)

3. ಮಾಹೆಯಾನ ರೂ. 1000-00 ಭತ್ಯೆ.

4. ಕೆ.ಸಿ.ಎಸ್. ನಿಯಮಗಳ ಪ್ರಕಾರ ಪ್ರಯಾಣ ಭತ್ಯ (ವ್ಯಾಸಂಗಕ್ಕಾಗಿ ಕಾರ್ಯ ವರದಿ ಮಾಡಿದ ದಿನಾಂಕ ಮತ್ತು ವ್ಯಾಸಂಗ ಮುಕ್ತಾಯಗೊಂಡ ದಿನಾಂಕದ ಎರಡು ಪ್ರಯಾಣಗಳಿಗೆ ಮಾತ್ರ)

ಊ) ಉನ್ನತ ವ್ಯಾಸಂಗಕ್ಕಾಗಿ ನಿಯೋಜಿಸಿರುವ ಅಭ್ಯರ್ಥಿಯು ಕರ್ನಾಟಕ ಸರ್ಕಾರದ ಸೇವಾ ನಿಯಮ 62ರ ಪ್ರಕಾರ ಷರತ್ತುಗಳನ್ನು ಉಲ್ಲಂಘನೆ ಮಾಡಿರುವವರ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸಲು ಅವಕಾಶ ಇರುತ್ತದೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು: ಪ್ರಶ್ನೆ ಯಾರು ಕೇಳಬೇಕೋ ಅವರು ಕೇಳುತ್ತಿದ್ದಾರೆ, ಉತ್ತರ ಯಾರು ಕೊಡಬೇಕೋ ಅವರು ಕೊಡುತ್ತಿದ್ದಾರೆ. ಮಾನ್ಯ ಚಂದ್ರೇಗೌಡರು ಏನೋ ಹೇಳುತ್ತಾರೆ, ಕೇಳೋಣ.

+ ಶ್ರೀ ಡಿ.ಬಿ.ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, ಸದನವನ್ನು ಈ ಸ್ಥಿತಿಯಲ್ಲಿ ನಡೆಸಬೇಕೆಂದು ಸರ್ಕಾರಕ್ಕೂ ಇಚ್ಛೆ ಇಲ್ಲ. ತಮಗೂ ಇಚ್ಛೆ ಇಲ್ಲ. ಅವರಿಗೂ ಇಚ್ಛೆ ಇಲ್ಲ. ಆದರೆ ಏನಾದರೂ ಮಾಡಿ ಪರಿಸ್ಥಿತಿಯನ್ನು ಸರಿಪಡಿಸಬೇಕು ಎಂದು ತಮ್ಮ ಕರೆಗೆ ಓಗೊಟ್ಟು ಪ್ರಾಮಾಣಿಕವಾಗಿ ಸರ್ಕಾರದ ವತಿಯಿಂದ ನಾವು ನಮ್ಮ ಪ್ರಯತ್ನ ಮಾಡಿದ್ದೇವೆ. ಆದರೆ ಅವರು ಅವರ ನೆಲಗಟ್ಟಿನ ಮೇಲೆ ಬಲವಾಗಿ ನಿಂತುಬಿಟ್ಟಿದ್ದಾರೆ. ನಾವು ಅನೇಕ ಸಲಹೆಗಳನ್ನು ಕೊಟ್ಟೆವು. ಆದರೆ ಅವರು ಯಾವ ಕಾರಣಕ್ಕೂ ಈ ಮಸೂದೆಯನ್ನು ಪಾಸ್ ಮಾಡುವುದಕ್ಕೆ ಸಿದ್ಧರಿಲ್ಲ. ಸದನ ನಡೆಯಬೇಕು ಎನ್ನುವ ಇಚ್ಛೆ ಅವರಿಗೆ ಇದ್ದರೆ, ಮಸೂದೆ ತಂದಾಗ ಏನಾದರೂ ಮಾಡಲಿ. ಪ್ರಶ್ನೋತ್ತರ ನಡೆಸಬೇಡಿ, ಕಾಲಿಂಗ್ ಅಟೆನ್‌ಷನ್ ನಡೆಸಬೇಡಿ. ಮಸೂದೆಗಳನ್ನು ಮಂಜೂರು ಮಾಡಬೇಡಿ ಎನ್ನುವುದು ಸರಿಯೇ? ದುರಾದೃಷ್ಟವೆಂದರೆ ಕಳೆದ ಅನೇಕ ದಿವಸಗಳಿಂದ ಈ ಸದನದಲ್ಲಿ ಸರ್ಕಾರದ ಕಲಾಪಗಳು ನಡೆದೇ ಇಲ್ಲ. ಮೊದಲನೇ ಬಿಲ್ಲನ್ನು ನಾವು ಇಂಟ್ರೊಡ್ಯೂಸ್ ಮಾಡಿದ್ದೇವೆ. ಅದಕ್ಕೆ ಅವರ ಅಡ್ಡಿ ಇದೆ. ಆದರೆ ನಮ್ಮ ನಿಯಮಾವಳಿ ಪ್ರಕಾರ ಮೊದಲು ಸರ್ಕಾರದ ಕೆಲಸ ಆಗಬೇಕು. ಮೊದಲನೇ ಬಿಲ್ಲನ್ನೇ ಅವರು ಈ ರೀತಿ

ವಿರೋಧ ಮಾಡುತ್ತಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ, ತಮ್ಮ ಮೂಲಕ ಅವರಲ್ಲಿ ಮನವಿ ಮಾಡುತ್ತೇನೆ, ಸದನ ನಡೆಸುವುದಕ್ಕೆ ಬೇಕಾದಂಥ ವಾತಾವರಣವನ್ನು ಅವರು ನಿರ್ಮಿಸಿ ಕೊಡಬೇಕು. ಈಗಾಗಲೇ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಹರಿಜನರ ಕೊಲೆಯಾಗಿದೆ, ರೈತರಿಗೆ ಅನ್ಯಾಯವಾಗಿದೆ ಎನ್ನುವುದನ್ನೆಲ್ಲಾ ಹೇಳಿದ್ದಾರೆ, ಅದಕ್ಕೆಲ್ಲಾ ಉತ್ತರ ಹೇಳಿದ್ದೇವೆ. ಇವುಗಳಿಗೆ ಉತ್ತರ ಹೇಳುವುದಕ್ಕೂ ಕೂಡ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ರೈತರಿಗೆ ಏನೇನು ಅನ್ಯಾಯವಾಗಿದೆ ಎಂದು ನಿನ್ನೆಯೆಲ್ಲಾ ಚರ್ಚೆ ಮಾಡಿದ್ದೀರಿ. ಅದಕ್ಕೆ ಉತ್ತರ ಹೇಳುವುದಕ್ಕೂ ತಾವು ಇವತ್ತು ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ಈಗ ಯಾವುದೇ ಕಲಾಪ ನಡೆಯಬಾರದು ಎನ್ನುವುದು ಅವರ ನಿರ್ಣಯವಾಗಿದ್ದರೆ ಏನು ಮಾಡಬೇಕೆನ್ನುವುದನ್ನು ನಾವು ತಮಗೆ ಬಿಟ್ಟಿದ್ದೇವೆ. ಅದಕ್ಕಾಗಿ, ನಾನು ತಮ್ಮ ಮೂಲಕ ಅವರನ್ನು ಮನವಿ ಮಾಡುವುದು ಇಷ್ಟೇ, ಪ್ರಶ್ನೋತ್ತರಗಳು ಈ ಸದನದ ಸದಸ್ಯರ ಹಕ್ಕು, ತಾವು ಅದರ ಮಾಲೀಕರು; ಇದನ್ನು ನಡೆಸಿಕೊಡಬೇಕು ಎಂದು ಅವರಲ್ಲಿ ಕೇಳುತ್ತೇವೆ. ಕೇವಲ ಒಂದು ಶಾಸನಕ್ಕಾಗಿ ಯಾವುದೇ ಕಲಾಪವನ್ನು ನಡೆಯಗೊಡುವುದಿಲ್ಲವೆಂದರೆ ನಾನು ಅದನ್ನು ಅವರ ವಿವೇಚನೆಗೇ ಬಿಡುತ್ತೇನೆ. ಸಾಕಷ್ಟು ಅನುಭವಿಗಳು, ಸುಮಾರು 4-5-6 ಸಲ ಗದ್ದುಬಂದು ಸದನವನ್ನು ನಡೆಸಿರತಕ್ಕಂಥ ಅನುಭವೀ ಶಾಸಕರಿದ್ದಾರೆ. ಅವರ ವಿವೇಚನೆಗೇ ಬಿಡುತ್ತೇನೆ. ತಾವು ಅನುಮತಿ ಕೊಟ್ಟರೆ, ಸರ್ಕಾರ ತನ್ನ ಕರ್ತವ್ಯವನ್ನು ಮಾಡುವುದಕ್ಕೆ ಸಿದ್ಧವಾಗಿದೆ. ಯಾವ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕು ಎನ್ನುವುದನ್ನು ತಮ್ಮ ನಿರ್ಣಯಕ್ಕೇ ಬಿಡುತ್ತೇವೆ.

3. ಶಾಸನರಚನಾ ಕಾರ್ಯಕಲಾಪ

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2000

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ''2000ದ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಸಲಾಯಿತು

(ಗೊಂದಲ)

(ಸನ್ಮಾನ್ಯ ಸದಸ್ಯರಾದ ಶ್ರೀ ಪಿ.ಜಿ.ಆರ್.ಸಿಂಧ್ಯಾ ಅವರು ಸದನದ ಬಾವಿಯಿಂದ